ದಾನ ಮಾಡಿರಿ,
ಆದರೆ ಅದರಿಂದ
ಪ್ರತಿಫಲ
ನಿರೀಕ್ಷಿಸಬೇಡಿ.
ಅದು ತಾನಾಗಿಯೇ
ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ
ಮುಂದಿಟ್ಟ ಹೆಜ್ಜೆ
ಹಿಂದಿಡಬೇಡ...
ಏಕೆಂದರೆ...
ಯಾರಿಗೆ ಗೊತ್ತು ಆ ಹೆಜ್ಜೆ
ನಿನ್ನ ಇತಿಹಾಸವನೇ ಸೃಷ್ಟಿ
ಮಾಡುವ
ಹೆಜ್ಜೆಯಾಗಿರಬಹುದು...

bidarvani.com ಇ-ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:198 ದಿನಾಂಕ:06.11.2025 ಗುರುವಾರ ಪುಟ.4 ಬೆಲೆ:02 ರೂ ಮೊ.9945793175

## ಕನ್ನಡ ಚಿತ್ರಗಳಿಗೆ ಜಾಗತಿಕ ವೇದಿಕೆ ಕಲ್ಪಿಸಲು ಒಟಿಟಿ ಸ್ಥಾಪನೆ ಶೀಘ್ರ:

### ಕಂಠೀರವ ಸ್ಟುಡಿಯೋಸ್ ವಜ್ರ ಮಹೋತ್ಸವಕ್ಕೆ ಸರ್ಕಾರದಿಂದ 1 ಕೋಟಿ ರೂ. ಬಿಡುಗಡೆ- ಮಹಬೂಬ್ ಪಾಷಾ



ಬೀದರು.ನ05:ಮುಂಬರುವ ಹೊಸ ವರ್ಷದಲ್ಲಿ ಕನ್ನಡ ಚಿತ್ರಗಳಿಗೆ ಜಾಗತಿಕ ವೇದಿಕೆ ಕಲ್ಪಿಸಲು ಶೀಘ್ರವೆ ಓಟಿಟಿ ಪ್ರಾರಂಭಿಸಲಾಗುತ್ತಿದೆ ಎಂದು ಕಂಠೀರವ ಸ್ಟುಡಿಯೋಸ್ ನಿಯಮಿತ ಅಧ್ಯಕ್ಷ ಮಹಬೂಬ್ ಪಾಷಾ ಹೇಳಿದರು. ಅವರು ಬುಧವಾರ ನಗರದ ಪತ್ರಿಕಾಭವನದಲ್ಲಿ ಆಯೋಜಿಲಾದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಮೆಜಾನ್, ಜೀ5, ಜಿಯೋ ಹಾಟ್‌ಸ್ಟಾರ್, ನೆಟ್‌ಫ್ಲಿಕ್ಸ್ ಸೇರಿದಂತೆ ಖಾಸಗಿ ಓಟಿಟಿಗಳಲ್ಲಿ ಕನ್ನಡದ ಆಯ್ದ ಚಲನಚಿತ್ರಗಳಿಗೆ ಮಾತ್ರ ವೇದಿಕೆ ದೊರಕುತ್ತಿದೆ. ಇದರಿಂದಾಗಿ ಸುಮಾರು 4 ಸಾವಿರಕ್ಕೂ ಅಧಿಕ ಕನ್ನಡ ಸಿನಿಮಾಗಳು, ವಿತರಕರು ಹಾಗೂ ಚಿತ್ರ ಮಂದಿರಗಳ ಕೊರತೆಯಿಂದ ಬಿಡುಗಡೆ ಭಾಗ್ಯವನ್ನೇ ಕಂಡಿಲ್ಲ. ಇದರಿಂದಾಗಿ ನಿರ್ಮಾಕರು, ಕಲಾವಿದರು, ತಂತ್ರಜ್ಞರು ಸಂಕಷ್ಟದಲ್ಲಿ ಇದ್ದಾರೆ. ಇಂಥ ಸಿನಿಮಾಗಳಿಗೆ ಕೇವಲ ನಮ್ಮ ರಾಜ್ಯ, ದೇಶ ಮಾತ್ರವಲ್ಲ, ಜಾಗತಿಕವಾಗಿ ವೇದಿಕೆ ಕಲ್ಪಿಸಿ ಕೊಡಲು ಸರ್ಕಾರದಿಂದಲೇ ಮುಂಬರುವ ಹೊಸ ವರ್ಷದಲ್ಲಿ ಓಟಿಟಿ ಪ್ರಾರಂಭಿಸಲಾಗುತ್ತಿದೆ. ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಉನ್ನತ ಮಟ್ಟದ ಸಮಿತಿ ಸಹ ರಚಿಸಲಾಗಿದೆ ಎಂದು ಅಧ್ಯಕ್ಷ ಮೆಹಬೂಬ್ ಪಾಷಾ ತಿಳಿಸಿದರು.

ಓಟಿಟಿ ಸ್ಥಾಪನೆಗೆ ಸಂಬಂಧ ಈಗಾಗಲೆ ಸರ್ಕಾರ ಬಜೆಟ್‌ನಲ್ಲಿಯೇ ಘೋಷಿಸಿದೆ. ತಾಂತ್ರಿಕ ಸಿದ್ದತೆಗಳನ್ನು ಕೂಡ ಕೈಗೊಳ್ಳಲಾಗಿದೆ. ಹಲವು ಬಾರಿ ಉನ್ನತ ಮಟ್ಟದ ಸಭೆಗಳು ನಡೆದಿವೆ. ಓಟಿಟಿ ಸ್ಥಾಪನೆಯಿಂದ ಕನ್ನಡ ಸಿನಿಮಾಗಳ ಜೊತೆಗೆ ಧಾರವಾಹಿ,ಜಾನಪದ ಕಲೆ ಹಾಗೂ ಸ್ಥಳೀಯ ಮತ್ತು ಬುಡಕಟ್ಟು ಸಂಸ್ಕೃತಿಗಳಿಗೂ ಸಹ ಜಾಗತಿಕ ಮಟ್ಟದಲ್ಲಿ ವೇದಿಕೆ ದೊರಕಲಿದೆ. ವಿವಿಧ ಡಿಜಿಟಲ್ ವೇದಿಕೆಗಳಲ್ಲಿ ಚಲನಚಿತ್ರಗಳ ವೀಕ್ಷಣೆಗೆ ಹೆಚ್ಚಿನ ದರ ವಿಧಿಸಿದರೆ, ರಾಜ್ಯ ಸರ್ಕಾರ ಪ್ರಾರಂಭಿಸಿವ ಓಟಿಟಿ ವೇದಿಕೆಯಲ್ಲಿ ಅಲ್ಪ ಮೊತ್ತ ಪಾವತಿಸಿ, ವಿಶ್ವದ ಎಲ್ಲೆಡೆ ಇರುವ ಕನ್ನಡಿಗರು ಚಂದಾದರರಾಗಿ ಕನ್ನಡ ಸಿನಿಮಾ ಹಾಗೂ ಜಾನಪದ ಕಲೆಗಳನ್ನು ವೀಕ್ಷಿಸಬಹುದಾಗಿದೆ. ಇದರಿಂದ ಸಂಕಷ್ಟದಲ್ಲಿರುವ ನಿರ್ಮಾಪಕರಿಗೆ, ನಿರ್ದೇಶಕರಿಗೆ, ನಟ ನಟಿಯರು, ಕಲಾವಿದರು ತಂತ್ರಜ್ಞರಿಗೆ ಇದರಿಂದ ಉಪಯುಕ್ತವಾಗಲಿದೆ. ಜೊತೆಗೆ ಹೊಸ ಪ್ರತಿಭೆಗಳಿಗೂ ಹೆಚ್ಚಿನ ಅವಕಾಶ ದೊರಕಲಿದೆ. ವೀಕ್ಷಣೆಯ ಆಧಾರದಲ್ಲಿ ನಿರ್ಮಾಪಕರೊಂದಿಗೆ ಲಾಭಾಂಶವನ್ನು ಹಂಚಿಕೊಳ್ಳಲಾಗುವುದು ಎಂದು ಅಧ್ಯಕ್ಷ ಮೆಹಬೂಬ್ ಪಾಷಾ ಅವರು ಸ್ಪಷ್ಟಪಡಿಸಿದರು.

ಸರ್ಕಾರಿ ಸ್ವಾಮ್ಯದ ಕಂಠೀರವ ಸ್ಟುಡಿಯೋಸ್ ಸ್ಥಾಪನೆಯಾಗಿ 60 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ವಜ್ರ ಮಹೋತ್ಸವ ಆಚರಣೆ ಮಾಡಲು ಉದ್ದೇಶಿಸಲಾಗಿದೆ. ಈ ಹಿನ್ನಲೆಯಲ್ಲಿ ಸಿನಿಮಾ ನಿರ್ಮಾಣ, ಸ್ಟುಡಿಯೋ ಕುರಿತು ವಿಚಾರ ಸಂಕಿರಣ, ಕಂಠೀರವ ಸ್ಟುಡಿಯೋಸ್ ನಿರ್ಮಾಣದ ಸ್ಥಾಪಕ ಟಿ.ಎಸ್.ಕರಿಬಸವಯ್ಯ ಪುತ್ಥಳಿ ನಿರ್ಮಾಣ, ಮಾಜಿ ಮುಖ್ಯಮಂತ್ರಿ ದಿ. ಎಸ್.ನಿಜಲಿಂಗಪ್ಪ ಚಲನಚಿತ್ರ ನಿರ್ಮಾಣ ಮಾಡುವುದು ಹಾಗೂ ಸಂಗೀತ ಸಂಜೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗುತ್ತಿದೆ ಎಂದರು.ಕಂಠೀರವ ಸ್ಟುಡಿಯೋಸ್ ವಜ್ರ ಮಹೋತ್ಸವ ಆಚರಣೆಗಾಗಿ ಸರ್ಕಾರದಿಂದ ಈಗಾಗಲೇ 1 ಕೋಟಿ ರೂ. ಅನುದಾನ ಮಂಜೂರಾಗಿದ್ದು, ಇನ್ನೂ ಹೆಚ್ಚಿನ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಲಾಗಿದೆ. ವಜ್ರ ಮಹೋತ್ಸವ ಆಚರಣೆ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

## ಅಪರಿಚಿತ ವ್ಯಕ್ತಿ ಮೃತ: ವಾರಸುದಾರರ ಪತ್ತೆಗಾಗಿ ಮನವಿ

ಬೀದರ.ನ.05:ಬೀದರ ಗಾಂಧಿ ಗಂಜ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಚಿದ್ರಿ ಬುತ್ತಿ ಬಸವಣ್ಣ ದೇವಸ್ಥಾನ ಹತ್ತಿರ ಅಂದಾಜು 32 ವರ್ಷ ವಯಸ್ಸಿನ ಒಬ್ಬ ಅಪರಿಚಿತ ಗಂಡು ವ್ಯಕ್ತಿಯು ದಿನಾಂಕ: 30-10-2025 ರಂದು ಮೃತ ದೇಹ ಕಂಡುಬಂದಿದ್ದು, ಈವರೆಗೆ ಇತನ ವಾರಸುದಾರರು ಯಾರೆಂದು ಪತ್ತೆಯಾಗಿರುವುದಿಲ್ಲ.ಬೀದರನ ಚಿದ್ರಿ ನಿವಾಸಿ ನಾಗರಾಜ ಬಾಬುರಾವ ಇವರ ಲಿಖಿತ ದೂರಿನನ್ವಯ ಬೀದರ ಗಾಂಧಿ ಗಂಜ ಪೊಲೀಸ್ ಠಾಣೆಯ ಯು.ಡಿ.ಆರ್.ಸಂ.19/2025 ರಡಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. ಮೃತ ವ್ಯಕ್ತಿಯು ಅಂದಾಜು 5 ಅಡಿ 6 ಇಂಚ್ ಎತ್ತರ ಇದ್ದು, ಕೆಂಚನೆ ಮೈಬಣ್ಣ, ಸದೃಢ ಮೈಕಟ್ಟು ಹೊಂದಿದ್ದು, ಮೈಮೇಲೆ ಹಾಫ್ ವೈಟ್ ಕಲರಿನ ಫುಲ್ ಟೀ ಶರ್ಟ್, ಸಿಮೆಂಟ್ ಕಲರಿನ ಜೀನ್ಸ್ ಪ್ಯಾಂಟು ಧರಿಸಿದ್ದು ಇರುತ್ತದೆ. ಈ ಮೃತ ಅಪರಿಚಿತ ವ್ಯಕ್ತಿಯ ವಾರಸುದಾರರು ಯಾರಾದರೂ ಪತ್ತೆಯಾದಲ್ಲಿ ಗಾಂಧಿ ಗಂಜ್ ಪೊಲೀಸ್ ಠಾಣೆ ಬೀದರ ದೂರವಾಣಿ ಸಂಖ್ಯೆ: 08482-226233, ಮೊಬೈಲ್: 9480803448, ಬೀದರ ಕಂಟ್ರೋಲ್ ರೂಂ. ದೂರವಾಣಿ ಸಂಖ್ಯೆ: 08482-226704 ಗೆ ಸಂಪರ್ಕಿಸುವಂತೆ ಬೀದರ ಗಾಂಧಿ ಗಂಜ್ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್ಸಪೇಕ್ಟರ್ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಡಾ.ರಜನೀಶ ವಾಲಿಯವರಿಗೆ ಗೌರವ ಸನ್ಮಾನ

ಬೀದರ್.ನ.05:ನಗರದ ಹೈ.ಕ.ಶಿ. ಸಂಸ್ಥೆಯ ಬಿ.ವಿ.ಭೂಮರಡ್ಡಿ ಪದವಿ ಮಹಾವಿದ್ಯಾಲಯದಲ್ಲಿ ಸೋಮವಾರ ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಹಾಗೂ ಬಿ.ವಿ.ಬಿ. ಶಾಲಾ ಕಾಲೇಜು ಆವರಣದ ಸಂಚಾಲಕರಾದ ಡಾ. ರಜನೀಶ್ ಎಸ್. ವಾಲಿಯವರಿಗೆ ಬೀದರ ಚೇಂಬರ್ ಆಫ್ ಕಾಮರ್ಸ್ ಉಪಾಧ್ಯಕ್ಷರಾಗಿ ಸತತ 4ನೇ ಬಾರಿ ಆಯ್ಕೆಯಾಗಿದ್ದರಿಂದ ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ದೀಪಾ ರಾಗ, ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆ, ಸೈನಿಕ ಶಾಲೆ ಹಾಗೂ ನ್ಯಾಷನಲ್ ಆಂಗ್ಲ ಮಾಧ್ಯಮ ಪಬ್ಲಿಕ್ ಸ್ಕೂಲಿನ ಪ್ರಾಂಶುಪಾಲರಾದ ಶ್ರೀಲತಾ ಹಾಗೂ ಮಹಾವಿದ್ಯಾಲಯ ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರಿಂದ ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.



## ಡಿಸೆಂಬರ್ ನಲ್ಲಿ ಪತ್ರಕರ್ತರಿಗೆ ಇನ್ಫೋಸಿಸ್ ನಿಂದ ಮತ್ತೊಮ್ಮೆ ತರಬೇತಿ ಕಾರ್ಯಕ್ರಮ:ಆಯಿಷಾ ಖಾನಂ



ಬೀದರ್.ನ.04: ಡಿಸೆಂಬರ್ ತಿಂಗಳಲ್ಲಿ ಇನ್ಫೋಸಿಸ್ ಸಂಸ್ಥೆಯಿಂದ ಕರ್ನಾಟಕ ಮಾಧ್ಯಮ ಅಕಾಡೆಮಿ ಸಂಯೋಗದಲ್ಲಿ ನಾಡಿನ ಪತ್ರಕರ್ತರಿಗೆ ಎರಡನೇ ಹಂತದ ವಿಶೇಷ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನಂ ತಿಳಿಸಿದರು.ರಾಜ್ಯ ರಾಜ್ಯಧಾನಿ ಬೆಂಗಳೂರಿನಲ್ಲಿರುವ ತಮ್ಮ ಕಚೇರಿಗೆ ಆಗಮಿಸಿದ ಬೀದರ್ ಜಿಲ್ಲೆಯ ಪತ್ರಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈಗಾಗಲೇ ಬೀದರ್ ಜಿಲ್ಲೆಯಿಂದ ಇಬ್ಬರು ಪತ್ರಕರ್ತರಾದ ಹಣಮಂತ ದೇಶಮುಖ ಹಾಗೂ ಯೋಹನ್ ಈ ಇಬ್ಬರು ಪತ್ರಕರ್ತರು ಇನ್ಫೋಸಿಸ್ ನಿಂದ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಮಾಧ್ಯಮ ತರಬೇತಿ ಪಡೆದಿದ್ದಾರೆ. ಈಗ ಎರಡನೇ ತರಬೇತಿ ಡಿಸೆಂಬರ್ ನಲ್ಲಿ ನಡೆಯಲಿದ್ದು, ಅದಕ್ಕೆ ಬೀದರ್ ಜಿಲ್ಲೆಯಿಂದ ಹೆಚ್ಚಿನ ಪತ್ರಕರ್ತರು ನೋಂದಣಿ ಮಾಡಿ ಈ ವಿಶೇಷ ತರಬೇತಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು

ಮುಂದುವರೆದು ಮಾತನಾಡಿದ ಆಯಿಷಾ ಖಾನಂ ಅವರು, ಬಿದ್ರಿ ಕಲೆ ಇಡೀ ವಿಶ್ವದಲ್ಲೇ ಪ್ರಸಿದ್ಧಿ ಪಡೆದಿರುವ ಕಲೆಯಾಗಿದ್ದು, ಈ ಕಲೆಯನ್ನು ಉಳಿಸಿ ಬೆಳೆಸಲು ಮಾಧ್ಯಮದವರ ಪಾತ್ರ ಸಹ ಬಹಳಷ್ಟಿದೆ. ಹಾಗಾಗಿ ಬಿದ್ರಿ ಕಲೆ ಹಾಗೂ ಅಲ್ಲಿಯ ಕಲೆಯನ್ನು ಪೋಷಿಸುವವರು ಅದನ್ನು ನಿತ್ಯ ಕಾರ್ಯ ರೂಪಕ್ಕೆ ತರುವ ಕರಕುಶಲ ಕರ್ಮಿಗಳಿಗೆ ಸಹಾಯ ಹಾಗೂ ಸಹಕಾರ ಅಗತ್ಯವಾಗಿದ್ದು, ಮಾಧ್ಯಮದವರು ಕರಕುಶಲಕರ್ಮಿಗಳ ಕಾರ್ಯಶೈಲಿಯನ್ನು ನಾಡಿನ ಎಲ್ಲಾ ಅಧಿಕಾರಿಗಳು ಜನ ಪ್ರತಿನಿಧಿಗಳು ಹಾಗೂ ಸರ್ಕಾರದ ಗಮನಕ್ಕೆ ತರಬೇಕೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ನಿಕತಪೂರ್ವ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ ಸ್ವಾಮಿ, ಜಿಲ್ಲಾ ಕಾರ್ಯದರ್ಶಿ ಪೃಥ್ವಿರಾಜ್ ಎಸ್ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನಂ ಅವರಿಗೆ ಶಾಲು ಹೊಂದಿಸಿ, ಹೂಗುಚ್ಚ ನೀಡಿ ಗೌರವಿಸಿದರು.

## ಗ್ಲೋಬಲ್ ಸೈನಿಕ ಅಕಾಡೆಮಿಯಲ್ಲಿ ದಶಮಾನೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ದಿನ ಆಚರಣೆ

ಬೀದರ್.ನ.05:ನಗರದ ಹೊರವಲಯದಲ್ಲಿರುವ ಗ್ಲೋಬಲ್ ಸೈನಿಕ ಅಕಾಡೆಮಿ ಶಾಲೆಯಲ್ಲಿ ಶನಿವಾರ ಶಾಲೆಯ ದಶಮಾನೋತ್ಸವ ಹಾಗೂ ಕನ್ನಡ ರಾಜ್ಯೋತ್ಸವ ಬಹಳ ಸಡಗರ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಗ್ಲೋಬಲ್ ಸೈನಿಕ ಅಕಾಡೆಮಿಯ ಅಧ್ಯಕ್ಷರಾದ ಕರ್ನಲ್ ಶರಣಪ್ಪ ಸಿಕೇನಪುರೆ ಹಾಗೂ ಡಾ. ಗುರುರಾಜ ಕರಜಗಿ ಅವರು ಭಾರತಾಂಬೆಯ ಮತ್ತು ಕನ್ನಡ ತಾಯಿ ಭುವನೇಶ್ವರಿ ದೇವಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಸೇನಾ ಸಿಬ್ಬಂದಿ ಮಾಜಿ ಉಪಾಧ್ಯಕ್ಷ ಲೆಫ್ಟಿನೆಂಟ್ ಜನರಲ್ ಬಿ ಎಸ್ ರಾಜು ರಾಷ್ಟ್ರ ಧ್ವಜಾರೋಹಣ ಕಾರ್ಯ ಕ್ರಮ ನಿರ್ವಹಿಸಿದರು.

ಖ್ಯಾತ ಶಿಕ್ಷಣ ತಜ್ಞ ಡಾ. ಗುರುರಾಜ್ ಕರಜಗಿ , ಮೇಜರ್ ಜನರಲ್ ಜಿ ಶಂಕರ್ ನಾರಾಯಣನ್ ಮಾಜಿ ಜಿ. ಓ. ಸಿ, ಕಲ್ಬುರ್ಗಿ ವಿಶ್ವವಿದ್ಯಾಲಯದ ಮಾಜಿ ಕುಲಪತಿಗಳಾದ ಬಿ.ಜಿ ಮೂಲಿಮನಿ ಅವರು ಆಗಮಿಸಿದರು. ಜಿ.ಎಸ್.ಎ ಪ್ರಾರಂಭವಾಗಿ ಹತ್ತು ವರ್ಷಗಳು ಸರಿದು 11ನೇ ವರ್ಷಕ್ಕೆ ಕಾಲಿಡುವ ಶುಭಗಳಿಗ, ಹಲವು ಸಾಧನೆಗಳನ್ನು ಸಾಧಿಸಿ , ಪ್ರತಿಷ್ಠೆ ಪಡೆದ ಗ್ಲೋಬಲ್ ಸೈನಿಕ ಅಕಾಡೆಮಿಯು ತನ್ನ ದಶಮಾನೋತ್ಸವದ ಸವಿನೆನಪಿಗಾಗಿ ಮಕ್ಕಳಿಂದ ಅದ್ಭುತ ಸಮಾರಂಭದ ಮೆರವಣಿಗೆ ಪಥ ಸಂಚಲನ ಏರ್ಪಡಿಸಿತು.

ಎನ್.ಎಸ್.ಎಸ್ ಕೆಡೆಟ್ಸ್ ತಂಡದ ನಾಯಕಿಯು ತಮ್ಮ ತಂಡವನ್ನು ನಡೆಸಿಕೊಂಡು ಸಾಗಿದರು. ನಂತರ ಕೆಂಪು ಬಣ್ಣದ ಸಮವಸ್ತ್ರವನ್ನು ಧರಿಸಿ ಕರಿಯಪ್ಪ ತಂಡದ ನಾಯಕ ಉಪನಾಯಕ ತಮ್ಮ ತಂಡವನ್ನು ಮುನ್ನಡೆಸಿದರು. ಹಾಗೆ ನೀಲಿ ಬಣ್ಣದ ಸಮವಸ್ತ್ರವನ್ನು ಧರಿಸಿ ತಿಮ್ಮಯ್ಯ ತಂಡದ ನಾಯಕ ಮತ್ತು ಉಪನಾಯಕ ತಮ್ಮ ತಂಡವನ್ನು ಮುನ್ನಡೆಸಿದರು. ಹಾಗೆ ಹಸಿರು ಬಣ್ಣದ ಸಮವಸ್ತ್ರವನ್ನು ಧರಿಸಿ ಮಾಣಿಕಶಾ ತಂಡದ ನಾಯಕ ಮತ್ತು ಉಪನಾಯಕ ತಮ್ಮ ತಂಡವನ್ನು ಮುನ್ನಡೆಸಿಕೊಂಡು ಸಾಗಿದರು.

ನಂತರ ಬರುವ ಹಳದಿ ಬಣ್ಣದ ಸಮವಸ್ತ್ರವನ್ನು ಧರಿಸಿ ಸಲಾಮಿಯನ್ನು ಕೊಡುತ್ತಾ ಬ್ಯಾಂಡ್ ತಂಡದ ಜೊತೆಯಲ್ಲಿ ಅಚ್ಚುಕಟ್ಟಾಗಿ ಪಥ ಸಂಚಲದಲ್ಲಿ ಹೆಜ್ಜೆ ಹಾಕುತ್ತಾ ಶಿಸ್ತಿನ ಸಿಪಾಯಿಗಳಂತೆ ಮುನ್ನುಗ್ಗಿದರು. ಒಟ್ಟು 250ಕ್ಕೂ ಹೆಚ್ಚು ಮಕ್ಕಳು ಪಥ ಸಂಚಲನದಲ್ಲಿ ಭಾಗವಹಿಸಿದ್ದರು.

ತದನಂತರ ಅತಿಥಿಗಳಿಂದ ಜಿ.ಎಸ್.ಎ ನೂತನ ಕಟ್ಟಡದ ಉದ್ಘಾಟನಾ ಸಮಾರಂಭವು ನೆರವೇರಿತು . ನಂತರ ಸಾಂಸ್ಕೃತಿಕ ಕಾಯರ್ಕ್ರಮ ಏರ್ಪಡಿಸಿದ್ದರು.

ಅಕಾಡೆಮಿಯ ವಿದ್ಯಾರ್ಥಿಗಳು ಸುಂದರವಾದ ಸ್ವಾಗತ ನೃತ್ಯ ಮಾಡಿದರು. ಜಿ.ಎಸ್.ಎ ಸಾಕ್ಷ್ಯ ಚಿತ್ರದ ಬಿಡುಗಡೆಯ ಬಿಡುಗಡೆಯ ಕಾರ್ಯಕ್ರಮವನ್ನು ಜನರಲ್ ಶಂಕರ್ ನಾರಾಯಣನ್ ಅವರು ನಿರ್ವಹಿಸಿದರು. ಎಲ್ಲ ಮುಖ್ಯ ಅತಿಥಿ ಗಣ್ಯ ವ್ಯಕ್ತಿಗಳಿಗೆ ಸನ್ಮಾನಿಸಲಾಯಿತು. ತದನಂತರ ಅಕಾಡೆಮಿಯ ಅಧ್ಯಕ್ಷರಾದ ಕರ್ನಲ್ ಶರಣಪ್ಪ ಸಿಕೇನಪುರೆ ಅವರು ಪ್ರಾರಂಭಿಕ ನುಡಿಗಳನ್ನು ಹೇಳಿದರು. ಅವರು ನಿವೃತ್ತನರಾದ ನಂತರ ಅವರ ಏಕೈಕ ಕನಸು ಹಿಂದುಳಿದ ಹಾಗೂ ಕ್ರಮೇಣ ಪ್ರದೇಶದ ಮಕ್ಕಳಿಗೆ ಉನ್ನತ ಮಟ್ಟದ ಶಿಕ್ಷಣ ಹಾಗೂ ಶಿಸ್ತಿನ ಸಿಪಾಯಿಗಳಂತೆ ರೂಪೀಸುವುದಾಗಿತ್ತು ಅವರು ಗ್ಲೋಬಲ್ ಸೈನಿಕ ಅಕಾಡೆಮಿಯನ್ನು ಸ್ಥಾಪಿಸಿ ಮಕ್ಕಳಲ್ಲಿ ಶಿಸ್ತು ಸಂಯಮ ಆತ್ಮವಿಶ್ವಾಸವನ್ನು ಬೆಳೆಸಲು ಪ್ರೋತ್ಸಾಹಿಸುತ್ತಿದ್ದಾರೆ.



# ಕನ್ನಡ ಫಲಕಗಳ ಅಳವಡಿಕೆಗೆ ತಹಸೀಲ್ದಾರಗೆ ಕರವೇ ಒತ್ತಾಯ



ಆಳಂದ:ನ.05:ತಾಲೂಕಿನ ಅಂಗಡಿ ಮತ್ತು ವ್ಯಾಪಾರ ಸ್ಥಳಗಳ ಮೇಲಿರುವ ನಾಮ ಫಲಕಗಳಲ್ಲಿ ಕನಿಷ್ಠ ಶೇ 60 ರಷ್ಟು ಕನ್ನಡದಲ್ಲಿ ನಾಮ ಫಲಕ ಬರೆಯುವಂತೆ ಸರ್ಕಾರದ ಆದೇಶವಿದ್ದರೂ, ಈ ನಿಟ್ಟಿನಲ್ಲಿ ಸ್ವಯಂಪ್ರೇರಿತವಾಗಿ ಕನ್ನಡ ನಾಮಫಲಕಗಳನ್ನು ಅಳವಡಿಸಿಕೊಳ್ಳುವಂತೆ ಕರವೇ ಕಾರ್ಯಕರ್ತರು ತಾಲೂಕು ಆಡಳಿತವನ್ನು ಮನವಿ ಸಲ್ಲಿಸಿ ಒತ್ತಾಯಿಸಿದರು.

ಪಟ್ಟಣದ ತಾಲೂಕು ಆಡಳಿತಸೌಧನಲ್ಲಿ ತಹಶೀಲ್ದಾರ್ ಅಣ್ಣಾರಾವ್ ಪಾಟೀಲ್ ಅವರಿಗೆ ಕರ್ನಾಟಕ ರಕ್ಷಣಾ ವೇದಿಕೆ (ಕ.ರ.ವೇ) ಆಳಂದ ತಾಲೂಕು ಅಧ್ಯಕ್ಷ ಸಚಿನ್ ಜೆ. ಲೋಕಾಣಿ ನೇತೃತ್ವದಲ್ಲಿ ಕಾರ್ಯಕರ್ತರು ಮನವಿ ಪತ್ರ ಸಲ್ಲಿಸಿ ಒತ್ತಾಯಿಸಿ ಈ ಬೇಡಿಕೆಯನ್ನು ಈಡೇರದೆ ಹೋದಲ್ಲಿ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿನ್ ಜೆ. ಲೋಕಾಣಿ ಅವರು, “ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಎಲ್ಲೆಡೆಗೂ ಹಬ್ಬಿಸುವುದು ನಮ್ಮ ಜವಾಬ್ದಾರಿ. ಅಂಗಡಿ ಮಾಲೀಕರು ಈ ಆದೇಶವನ್ನು ಉಲ್ಲಂಘಿಸುತ್ತಿದ್ದರೆ, ನಾವು ಸಾಮಾನ್ಯ ಮನವಿಗಳಲ್ಲಿ ಸೀಮಿತವಾಗಿರುವುದಿಲ್ಲ. ಅಗತ್ಯವಿದ್ದರೆ ರಸ್ತೆಗಿಲ್ಲು ಹೋರಾಟ, ಧರಣೆ ಮತ್ತು ಕಾನೂನು ಹೋರಾಟಗಳನ್ನು ನಡೆಸುತ್ತೇವೆ” ಎಂದು ಹೇಳಿದರು. “ಕನ್ನಡವೇ ನಮ್ಮ ಜಾತಿ, ಕನ್ನಡವೇ ನಮ್ಮ ಧರ್ಮ” ಎಂಬ ಘೋಷಣೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವ ಈ ಸಂಘಟನೆಯು ಕನ್ನಡ ನಾಮಫಲಕಗಳ ಕಡ್ಡಾಯತೆಗಾಗಿ ಹಲವು ಬಾರಿ ಪ್ರತಿಭಟನೆಗಳನ್ನು ನಡೆಸಲಾಗಿದೆ ಎಂದರು.

ಸಂದರ್ಭದಲ್ಲಿ ಲಾಯಕಅಲಿ ಬೆಳವಮಗಿ, ಮಲ್ಲು ಬಿರಾದಾರ್,ಅರುಣ ಕೆರಮಗಿ, ರೋಹಿತ ಕೊರಳ್ಳಿ, ಬಬ್ಲು ಬಿಳಿರಾಮ ರಾಠೊಡ್, ಸಾಗರ ಕಡಗಂಚಿ, ಸಿದ್ದು ಬಿರಾದಾರ್, ವಿಲಾಸ ಕರಹರಿ, ಗಣೇಶ ನರೋಣಾ, ಮತ್ತು ಇತರ ಕ.ರ.ವೇ ಕಾರ್ಯಕರ್ತರು ಉಪಸ್ಥಿತರಿದ್ದು, ಈ ಮನವಿ ಗಂಭೀರವಾಗಿ ಪರಿಗಣಿಸುವುದಾಗಿ ತಹಶೀಲ್ದಾರ್ ಅಣ್ಣಾರಾವ್ ಪಾಟೀಲ್ ಅವರು ಭರವಸೆ ನೀಡಿದ್ದಾರೆ.

# ಹಜರತ್ ಪೀರ್ ಗಾಲಿಬ ಸಾಬ್ ಜಾತ್ರೆ ನಿಮಿತ್ತವಾಗಿ ರಕ್ತದಾನ ಶಿಬಿರ

ಆಲಮೇಲ.ನ.05 :ಥಲಸೇಮಿಯಾ ಕಾಯಿಲೆಯಿಂದ ಬಳಲುವ ಮಕ್ಕಳಿಗೆ, ಗರ್ಭಿಣಿಯರಿಗೆ, ಬಣಂತಿಯರಿಗೆ ರಕ್ತದ ಅವಶಕತೆ ಬೇಕಿರುವದರಿಂದ ಸ್ವಯಂ ಪ್ರೇರಣೆಯಿಂದ ರಕ್ತಧಾನ ಮಾಡಬೇಕು ಎಂದು ಡಾ. ಪ್ರಶಾಂತ ದೂಮಗೊಂಡ ಹೇಳಿದರು.

ಪಟ್ಟಣದ ಹಜರತ್ ಪೀರಗಾಲೀಬ ಸಾಹೇಬ ಉರುಸ್ (ಜಾತ್ರೆ) ನಿಮಿತ್ತಯ ಸಮುದಾಯದ ಆರೋಗ್ಯ ಕೇಂದ್ರದ ಅಹಯೋಗದಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಉಚಿತ ಆರೋಗ್ಯ ಶಿಬಿರ ಹಾಗೂ ಬ್ರಹತ್ ರಕ್ತಧಾನ ಶಿಬಿರದಲ್ಲಿ ಪಾಲ್ಗೊಂಡು ಮಾತನಾಡಿದರು.

ವಿಜಯಪುರ ಜಿಲ್ಲೆಯಲ್ಲಿ 100 ಮಕ್ಕಳು ಥಲಸೇಮಿಯಾ ಕಾಯಿಲೆಯಿಂದ ಬಳಲುತ್ತಿದ್ದು ಅವರಿಗೆ ಪ್ರತಿ ತಿಂಗಳು ರಕ್ತ ನೀಡಿದೆಡ ಅವರ ಜೀವ ರಕ್ಷಣೆ ಮಾಡಲು ಸಹಾಯವಾಗುತ್ತದೆ. ಹಾಗೆ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಡ ರೋಗಿಗಳಿಗೆ, ಗರ್ಭಿಣಿಯರಿಗೆ, ಬಾಣಂತಿಯುರಿಗೆ ಅನಕೂಲವಾಗಲಿದೆ. ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ರಕ್ತನಿಧಿ ಕೇಂದ್ರ ಆರಂಬಿಸಿದ್ದು ನಮ್ಮಲ್ಲಿ ರಕ್ತಧಾನ ಮಾಡುವದರಿಂದ ಬಡವರಿಗೆ ಅನಕೂಲವಾಗಲಿದೆ ಡಂದರು.

ರಕ್ತಧಾನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಣೆಯಿಂದ ರಕ್ತಧಾನ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಡಾ.ಶ್ರೀಶೈಲ ಪಾಟೀಲ, ಡಾ.ಸಂದೀಪ ಪಾಟೀಲ ಮಾತನಾಡಿ ರಕ್ತಧಾನ ಅತ್ಯಂತ ಶ್ರೇಷ್ಠವಾಗಿದ್ದು ತಾವು ಮಾಡುವ ರಕ್ತಧಾನದಿಂದ ಎಷ್ಟು ಜನರ ಜೀವ ರಕ್ಷಣೆ ಮಾಡಿದಂತೆ

ಅದಕ್ಕೆ ಎಲ್ಲರು ಸ್ವಯಂ ಪ್ರೇರಣೆಯಿಂದ ರಕ್ತ ಧಾನ ಮಾಡಬೇಕು ಎಂದು ಹೇಳಿದರು. ಟಿ.ಎಚ್.ಓ ಶಶಿಕಾಂತ ಬಾಗೇವಾಡಿ, ಮಂಜುನಾಥ ಆಕಾಶ, ಡಾ. ವರುಣ ಪಾಟೀಲ, ಡಾ. ರೀತೇಶ ಪಾಟೀಲ, ಡಾ. ಪೂಜಾ ಪಾಟೀಲ, ಡಾ. ಜಿ.ಎಸ್. ಪತ್ತಾರ, ಡಾ. ಅಜಯ ದೇಶಾಯ, ಜಿಲ್ಲಾ ಆಸ್ಪತ್ರೆಯ ರಕ್ತ ನೀಡಿಯ ಡಾ. ಸುಮಾ ಮಮದಾಪೂರ, ಸಂದೇಶ ಜೂಗೂರ, ಮಲ್ಲಿಕಾರ್ಜುನ್ ಪೂಜಾರಿ, ದತ್ತಾತ್ರೇಯ ಕುಲಕರ್ಣಿ, ನಿಂಗಪ್ಪ ಬೋಡಕೆ, ಎಫ್. ಎ. ಶೇಕ್. ಸೋಮನಾಥ್ ಜಾಮುಗೊಂಡ, ಶಿವರಾಜ್ ಹುಲ್ಲೂರ್, ಮಾಥರ್ಂಡ ವಗ್ಗೆ , ಸಂತೋಷ್ ಕೋರಿ, ಗಂಗುಬಾಯಿ ಅಮಲಝರಿ, ಆಶಾ ಕಾರ್ಯಕರ್ತೆಯರು ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು.



# ಪ್ರಧಾನಿ ಮೋದಿ ರಾಜಕಾರಣದಲ್ಲಿರುವವರೆಗೆ ಚುನಾವಣೆಗೆ ಸ್ಪರ್ಧೆ:ಜಿಗಜಿಣಗಿ

ಇಂಡಿ.ನ.05:ಪ್ರಧಾನಿ ನರೇಂದ್ರ ಮೋದಿ ಅವರು ರಾಜಕಾರಣದಲ್ಲಿ ಇರುವವರೆಗೆ ನಾನು ಚುನಾವಣೆಗೆ ಸ್ಪರ್ಧಿಸುವೆ. ನನಗೇನು ವಯಸ್ಸಾಗಿಲ್ಲ. ನಾನು ರಾಜಕಾರಣದಲ್ಲಿ ಇರುವವರೆಗೆ ನಿವೆಲ್ಲಾ ಕಾರ್ಯಕರ್ತರು ನನ್ನ ಜತೆ ಇರಬೇಕು.ನಾನು ಬದುಕಿರುವವರೆಗೆ ನಿಮ್ಮ ಜತೆ ಇರುತ್ತೇನೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.



ಅವರು ಪಟ್ಟಣದ ಶ್ರೀ ಶಾಂತೇಶ್ವರ ಮಂಗಲ ಕಾರ್ಯಾಲಯದಲ್ಲಿ ಬಿಜೆಪಿ ಇಂಡಿ ಮಂಡಲ ಅಧ್ಯಕ್ಷ ಹಣಮಂತ್ರಾಯಗೌಡ ಪಾಟೀಲ ಅವರ ಪದಗ್ರಣ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಜನ್ಮಭೂಮಿ ಇಂಡಿ ತಾಲೂಕಿನಿಂದ ದೆಹಲಿವರೆಗೆ ನನ್ನನ್ನು ನಿಮ್ಮ ಮನೆಯ ಸಹೋದರನಂತೆ ಅಪ್ಪಿಕೊಂಡು ಆಶೀರ್ವಾದ ಮಾಡಿ ಕಳುಹಿಸಿದ್ದಿರಿ.ಆದರೆ ನನಗೆ ಒಂದು ನೋವು ಕಾಡುತ್ತಿದೆ. ಇಂಡಿ ತಾಲೂಕಿನಲ್ಲಿ ಪ್ರತಿ ಬಾರಿಯು ಸಂಸದರ ಚುನಾವಣೆಯಲ್ಲಿ ನನ್ನನ್ನು ಹೆಚ್ಚಿನ ಮತಗಳಿಂದ ಆಯ್ಕೆ ಮಡುವ ಕಾರ್ಯಕರ್ತರು ಶಾಸಕರ ಚುನಾವಣೆಯಲ್ಲಿ ಏಕ್ಕೆ ನಮ್ಮ ಪಕ್ಕದ ಅಭ್ಯರ್ಥಿಯುನ್ನು ಹೆಚ್ಚಿನ ಮತಗಳು ಬರುವುದಿಲ್ಲ. ಇದ್ದರಿಂದ ನನ್ನ ಶಕ್ತಿ ಕಡಿಮೆ ಮಾಡಬೇಡಿ. ನನ್ನ ರಾಜಕೀಯ ಪಾಠ ಶಾಲೆ ಇಂಡಿಯಿಂದಲೆ ಆರಂಭವಾಗಿದ್ದು. ನಾನು ಭಾವನಾತ್ಮಕ ರಾಜಕೀಯ ಮಾಡುವನು. ವೂಟಿಗಾಗಿ ಅಲ್ಲ, ನಾನು ಜೀವಂತ ಇರುವರಿಗೂ ಚುನಾವಣೆಗೆ ನಿಲುತ್ತೆನೆ.

ಜಾತ್ಯತೀತ ಹಾಗೂ ರಾಷ್ಟ್ರೀಯ ಮನೋಭಾವದಿಂದ ಕೆಲಸ ಮಾಡುತ್ತಿರುವ ಏಕೈಕ ಪಕ್ಷವೆಂದರೆ ಅದು ಬಿಜೆಪಿ ಮಾತ್ರ ಎಂದು ಹೇಳಿದರು.

ನೂತನ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ ಮಾತನಾಡಿ, ತಾಲ್ಲೂಕಿನ ಮುಖಂಡರು, ಕಾರ್ಯಕರ್ತರ ಸಹಕಾರದಿಂದ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲುವುದು ಮತ್ತು 2028 ಕ್ಕೆ ಶಾಸಕರ ಚುನಾವಣೆ ಮಾಡಿ ಇಂಡಿಯಲ್ಲಿ ಬಿಜೆಪಿ ಶಾಸಕ’ರಾಗಿ ನೋಡುವುದು ನನ್ನ ಗುರಿ. ಇದಕ್ಕೆ ಬಿಜೆಪಿ ನಾಯಕರು, ಕಾರ್ಯಕರ್ತರು ಹಗಲು ಇರಳು ಎನ್ನದೆ ಪಕ್ಷಕ್ಕೆ ದುಡಿಯುತ್ತೇವೆ.ಕಾರ್ಯಕರ್ತರು ಸಹಕಾರ ನೀಡಬೇಕು ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಗುರಲಿಂಗ ಅಂಗಡಿ, ಚಂದ್ರಶೇಖರ ಕವಟಗಿ, ಸಿದ್ದಲಿಂಗ ಹಂಜಗಿ, ಎಸ್.ಎ.ಪಾಟೀಲ, ಕಾಸುಗೌಡ ಬಿರಾದಾರ, ಮಳುಗೌಡ ಪಾಟೀಲ, ಮಲ್ಲಿಕಾರ್ಜುನ ಕಿವುಡೆ, ಶೀಲವಂತ ಉಮರಾಣಿ, ರಾಘವೇಂದ್ರ ಕಾಪಸೆ, ದೇವೆಂದ್ರ ಕುಂಬಾರ ಮಾತನಾಡಿದರು.

ಮುಖಂಡರಾದ ಅನಿಲ ಜಮಾದಾರ,ರಾಜಕುಮಾರ ಸಗಾಯಿ, ಭೀಮಸಿಂಗ ರಾಠೋಡ, ರವಿಕಾಂತ ಬಗಲಿ,ರಾಜಕುಮಾರ ಸಗಾಯಿ, ಬಿ.ಎಸ.ಪಾಟೀಲ, ವಿಜಯಲಕ್ಷ್ಮಿ ರೂಗಿಮಠ, ಅನಿಲಗೌಡ ಬಿರಾದಾರ, ರವಿ ವಗ್ಗಿ ಮಹೇಶ ಹೂಗಾರ, ಸೋಮು ನಿಂಬರಗಿಮಠ, ವೆಂಕಟೇಶ ಕುಲಕರ್ಣಿ ,,ಸಂಜು ದಶವಂತ, ಸಂತೋಷಗೌಡ ಪಾಟೀಲ, ರಾಮಸಿಂಗ ಕನ್ನೊಳ್ಳಿ, ಸುನಂದಾ ಗಿರಣಿವಡ್ಡರ, ಮಂಜುನಾಥ ದೇವರ,ಶಿವು ಬಗಲಿ,ರಮೇಶ ಧರೆನವರ, ದತ್ತಾ ಬಂಡೆನವರ, ಸಚಿನ ಬೊಳೆಗಾಂವ, ಮಲ್ಲು ವಾಲಿಕಾರ, ವಿಜುಗೌಡ ಪಾಟೀಲ ಸೇರಿದಂತೆ ಅನೇಕ ಕಾರ್ಯಕರ್ತರು ಉಪಸ್ಥಿತರಿದ್ದರು.

# ದೃಷ್ಟಿ ವಿಕಲಚೇತನ ಅಧಿಕಾರಿಗೆ ಮಾನಸಿಕ ಕಿರುಕುಳ: ಸಿದ್ಧಾರ್ಥ ಟೀಕೆ

ಕಲಬುರಗಿ:ನ.05: ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ದೃಷ್ಟಿ ವಿಕಲಚೇತನರಾಗಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀನಿವಾಸ ಬಾಳುವಾಲೆ ಅವರನ್ನು ಗುರಿಯಾಗಿಸಿಕೊಂಡು ಇಲಾಖೆಯ ಉಪನಿರ್ದೇಶಕರು ಹಾಗೂ ಅಧೀಕ್ಷಕರು ವಿನಾಕಾರಣ ಮಾನಸಿಕ ಹಿಂಸೆ ನೀಡುತ್ತಿದ್ದಾರೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಜನಪರ ವೇದಿಕೆಯ ಜಿಲ್ಲಾ ಉಪಾಧ್ಯಕ್ಷ ಹಾಗೂ ಸಾಮಾಜಿಕ ಕಾರ್ಯಕರ್ತ ಸಿದ್ಧಾರ್ಥ ಎಂ.ಕೆ. ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, 2017–18ನೇ ಸಾಲಿನಲ್ಲಿ ನಡೆದ ಕೆಪಿಎಸ್ಸಿ ಆಯ್ಕೆಯಲ್ಲಿ ದೃಷ್ಟಿ ವಿಕಲಚೇತನರ ಕೋಟಾ ಅಡಿ ನೇಮಕಾತಿ ಆಗಿರುವ ಅಧಿಕಾರಿಯಾಗಿದ್ದು, ಅತ್ಯಂತ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಆದರೂ ಅವರ ವಿರುದ್ಧ ವಿನಾಕಾರಣ ಇಲಾಖೆಯ ಕೆಲವು ಮೇಲಧಿಕಾರಿಗಳು ಇಲ್ಲದ ಕುತಂತ್ರಗಳನ್ನು ಅನುಸರಿಸುತ್ತಿದ್ದು, ಇಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಮೂಲಕ ಮುಕ್ತ ಹಾಗೂ ಪಾರದರ್ಶಕ ವಾತಾವರಣ ನಿರ್ಮಿಸಬೇಕೆಂದು ಒತ್ತಾಯಿಸಿದರು.

ಮೂಲತಃ ದೃಷ್ಟಿ ವಿಶೇಷಚೇತನರಾಗಿರುವ ಶ್ರೀನಿವಾಸ ಬಾಳುವಾಲೆ ಸಾಕಷ್ಟು ಅಡೆತಡೆಗಳನ್ನು ಕಷ್ಟಗಳನ್ನು ಅನುಭವಿಸಿ ಬಡ ಮಕ್ಕಳ ಸೇವೆಯ ಮಹತ್ತರ ಆಶಯದೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಸೇರ್ಪಡೆಯಾಗಿದ್ದಾರೆ. ಆದರೆ ಅವರನ್ನು ಹೇಗಾದರೂ ಸರಿ ಎತ್ತಂಗಡಿ ಮಾಡಿ ದರ್ಜೆ–2 ಅಧೀಕ್ಷಕ ಶಿವಶರಣಪ್ಪ ಸಿ. ಬುಶೆಟ್ಟಿ ಅವರನ್ನು ಕಲಬುರಗಿ ನಗರದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಸ್ಥಾನಕ್ಕೆ ತರಬೇಕೆಂಬ ಉದ್ದೇಶದಿಂದ ಶ್ರೀನಿವಾಸ ಬಾಳುವಾಲೆ ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡ ಕೇವಲ ಆರು ದಿನಗಳಲ್ಲಿ ಅವರಿಗೆ ನೋಟಿಸ್ ನೀಡುವ ಕೆಲಸವನ್ನು ಉಪನಿರ್ದೇಶನಕ ರಾಜಕುಮಾರ್ ರಾಠೋಡ್ ಮಾಡುವ ಮೂಲಕ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಒಬ್ಬ ಅಧಿಕಾರಿ ಕರ್ತವ್ಯಕ್ಕೆ ಹಾಜರಾದ ಕೇವಲ ಆರು ದಿನಗಳಲ್ಲಿ ಕಾರಣ ಕೇಳುವ ನೋಟಿಸ್ ಜಾರಿ ಮಾಡಿರುವುದನ್ನು ನೋಡಿದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ, ಅದರಲ್ಲೂ ಕಲಬುರಗಿ ನಗರ ವ್ಯಾಪ್ತಿಯಲ್ಲಿ ಈ ಹಿಂದೆ ನಡೆದಿರುವ ಭ್ರಷ್ಟಾಚಾರ ಪ್ರಕರಣಗಳನ್ನು ಮುಚ್ಚಿ ಹಾಕಲು ರಾಜಕುಮಾರ್ ರಾಠೋಡ್ ಮತ್ತು ಶಿವಶರಣಪ್ಪ ಬುಶೆಟ್ಟಿ ಯತ್ನಿಸುತ್ತಿರುವುದು ಮೇಲ್ನೋಟದಲ್ಲಿಯೇ ಸಾಬೀತಾಗುವಂತಿದೆ ಎಂದರು.

ಶ್ರೀನಿವಾಸ ಬಾಳುವಾಲೆ ಅವರ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ಜಿಲ್ಲಾ ಪಂಚಾಯಿತಿಯಿಂದ ನೋಟಿಸ್ ಜಾರಿಗೊಳಿಸುವ ಕೆಲಸ ಮಾಡಲಾಗಿದ್ದು, ಹೀಗೆ ಜಾರಿಗೊಳಿಸಿದ ನೋಟಿಸ್ ಶ್ರೀನಿವಾಸ ಬಾಳುವಾಲೆ ಅವರಿಗೆ ಕಳುಹಿಸದೆ ನೇರವಾಗಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡುವ ತಂತ್ರಗಾರಿಕೆಯನ್ನು ಉಪನಿರ್ದೇಶಕ ರಾಜಕುಮಾರ ರಾಠೋಡ್ ಹಾಗೂ ಅಧೀಕ್ಷಕ ಶಿವಶರಣಪ್ಪ ಬಿ.ಬುಶೆಟ್ಟಿ ಮಾಡಿದ್ದಾರೆ. ಆ ಮೂಲಕ ದೃಷ್ಟಿ ವಿಕಲಚೇತನ ಅಧಿಕಾರಿ ಬಾಳುವಾಲೆ ಅವರಿಗೆ ಉದ್ದೇಶಪೂರ್ವಕವಾಗಿ ಮಾನಸಿಕ ಹಿಂಸೆ ನೀಡುವ ಕೆಲಸ ಮಾಡಲಾಗುತ್ತಿದೆ ಎಂದು ಟೀಕಿಸಿದರು.





# ಆಶ್ರಯ ಕಾಲೋನಿಗೆ ಫರಾಜ್ ಉಲ್ ಇಸ್ಲಾಂ ಭೇಟಿ, ಪರಿಶೀಲನೆ



ಕಲಬುರಗಿ,ನ.05:ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಸದಸ್ಯ ಫರಾಜ್-ಉಲ್-ಇಸ್ಲಾಂ ಅವರು ಹರಿಜನವಾಡದ ಆಶ್ರಯ ಕಾಲೋನಿ ಮತ್ತು ಪಕ್ಕದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲನಾ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಭೇಟಿಯ ಸಮಯದಲ್ಲಿ ಫರಾಜ್-ಉಲ್-ಇಸ್ಲಾಂ ಅವರು ನಿವಾಸಿಗಳೊಂದಿಗೆ ಸಂವಾದ ನಡೆಸಿದರು ಮತ್ತು ಅವರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಪ್ರದೇಶದಲ್ಲಿ ಚಾಲ್ತಿಯಲ್ಲಿರುವ ನಾಗರಿಕ ಪರಿಸ್ಥಿತಿಗಳನ್ನು ಪರಿಶೀಲಿಸಿದರು. ಬಾಕಿ ಇರುವ ಎಲ್ಲಾ ಅಭಿವೃದ್ಧಿ ಮತ್ತು ಮೂಲಸೌಕರ್ಯ ಸಂಬಂಧಿತ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಮನ್ವಯದಿಂದ ಆದ್ಯತೆಯ ಆಧಾರದ ಮೇಲೆ ಪರಿಹರಿಸಲಾಗುವುದು ಎಂದು ಅವರು ಸಾರ್ವಜನಿಕರಿಗೆ ಭರವಸೆ ನೀಡಿದರು.

ಪರಿಶೀಲನೆಯು ನೈರ್ಮಲ್ಯ, ನೀರು ಸರಬರಾಜು, ಒಳಚರಂಡಿ ನಿರ್ವಹಣೆ ಮತ್ತು ವಸತಿ ಪರಿಸ್ಥಿತಿಗಳಂತಹ ವಿಷಯಗಳ ಮೇಲೆಯೂ ಕೇಂದ್ರೀಕರಿಸಿದೆ. ಈ ಸವಾಲುಗಳ ಪರಿಹಾರವನ್ನು ತ್ವರಿತಗೊಳಿಸಲು ಸ್ಥಳೀಯ ಪ್ರತಿನಿಧಿಗಳು ಮತ್ತು ಪಕ್ಷದ ಕಾರ್ಯಕರ್ತರು ಪುರಸಭೆ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರಬೇಕೆಂದು ಫರಾಜ್-ಉಲ್-ಇಸ್ಲಾಂ ನಿರ್ದೇಶನ ನೀಡಿದರು.

ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರ ಪ್ರಯತ್ನಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಫರಾಜ್-ಉಲ್-ಇಸ್ಲಾಂ, ದೀರ್ಘಕಾಲೀನ ಪ್ರಗತಿಯನ್ನು ಸಾಧಿಸಲು ನಿರಂತರ ತಳಮಟ್ಟದ ಒಳಗೊಳ್ಳುವಿಕೆ ಅತ್ಯಗತ್ಯ ಎಂದು ಹೇಳಿದರು. ಜೀವನ ಮಟ್ಟವನ್ನು ಹೆಚ್ಚಿಸಲು ಮತ್ತು ಪ್ರದೇಶದಾದ್ಯಂತ ನಾಗರಿಕ ಮೂಲಸೌಕರ್ಯವನ್ನು ಬಲಪಡಿಸಲು ಸಮುದಾಯದೊಂದಿಗೆ ನಿಕಟವಾಗಿ ಕೆಲಸ ಮಾಡುವುದನ್ನು ಮುಂದುವರಿಸುವ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

ಶಹಬಜಾರ್ ಬ್ಲಾಕ್ ಅಧ್ಯಕ್ಷ ಶರಣ್ ಕುಮಾರ್ ಗೋಡಿ ಮತ್ತು ಪಕ್ಷದ ಕಾರ್ಯಕರ್ತರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಉದನೂರಲ್ಲಿ 50 ಲಕ್ಷ ರೂ. ವೆಚ್ಚದ ರೈತ ಭವನ ಲೋಕಾರ್ಪಣೆ

ಕಲಬುರಗಿ.ನ.05:ಹೊರವಲಯದಲ್ಲಿರುವ ಉದನೂರ್ ಗ್ರಾಮದಲ್ಲಿ ಕೆ.ಎನ್.ಎನ್.ಎಲ್. ಅನುದಾನದಲ್ಲಿ 50 ಲಕ್ಷ ರುಪಾಯಿಗಳ ವೆಚ್ಚದಲ್ಲಿ ನಿರ್ಮಿಸಿರುವ ರೈತ ಭವನವನ್ನು ಸೋಮವಾರ ಸಂಜೆ ಲೋಕರ್ಪಾಣೆಗೊಳಿಸಲಾಯ್ತು.

ಶಾಸಕರಾದ ಅಲ್ಲಮಪ್ರಭು ಪಾಟೀಲ್ ಅವರು ರೈತ ಭವನ ಉದ್ಘಾಟಿಸಿ ಮಾತನಾಡುತ್ತಾ ರೈತರ ಸಂಕಷ್ಟಗಳಿಗೆ ರಾಜ್ಯ ಸಕ್ರಾರ ಸದಾಕಾಲ ಸ್ಪಂದಿಸುತ್ತದೆ ಎಂದರು. ಸತತ ಮಳೆ,ನೆರೆ ಹಾವಳಿಯಿಂದಾಗಿ ಜಿಲ್ಲೆಯಲ್ಲಿ ಈ ಬಾರಿ ಸಾಕಷ್ಟು ಬೆಳೆಹಾನಿಯಾಗಿದೆ.

ಈಗಾಗಲೇ ಸಿಎಂ ಸಿದ್ದರಾಮಯ್ಯನವರು ಬೆಳೆಹಾನಿ ವೀಕ್ಷಣೆ ಮಾಡಿ ರೈತರ ಸಂಕಟಗಲಿಗೆ ಸ್ಪಂದಿಸಿದ್ದಾರೆ. ಪ್ರತಿ ವಿಕೋಪ ಪರಿಹಾರ ನಿಧಿಯೊಂದಿಗೆ ರಾಜ್ಯದ ಪಾಲು ಪ್ರತಿ ಹೆಕ್ಟರ್‌ಗೆ 8, 500 ರೂ. ಸೇರಿಸಿ ಪರಿಹಾರ ನೀಡೋದಾಗಿ ರೈತರಿಗೆ ಭರವಸೆ ನೀಡಿದ್ದು ಈಗಾಗಲೇ ಸಮೀಕ್ಷೆ ಚಾಲ್ತಿಯಲ್ಲಿದೆ.

ರೈತರು ಪರಿಹಾರ ಹಣ ಪಡೆದು ಉತ್ತಮ ಬದುಕು ಕಟ್ಟಬೇಕೆಂದರು.

ಉದನೂರು ಗ್ರಾಮದಲ್ಲಿನ ರೈತ ಭವನದ ಲೋಕಾರ್ಪಣೆಯಲ್ಲಿ ಸುಕ್ಷೇತ್ರ ಉದನೂರ, ಜಿಡಗಾ ಮುಗಳಖೋಡಮಠದ ಪೀಠಾಧಿಪತಿಗಳಾದ ಪ. ಪೂ. ಶ್ರೀ ಷಡಕ್ಷರಿ ಶಿವಯೋಗಿ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಪವನಕುಮಾರ್ ವಳಕೇರಿ, ನೀಲಕಂಠರಾವ ಮೂಲಗೆ, ಧುತ್ತರಗಾಂವ್ ಸಿದ್ದಮಾಂಬೆತಾಯಿ, ನಂದಿಕೂರ ಗ್ರಾಪಂ ಅಧ್ಯಕ್ಷ ಚಂದ್ರಕಾಂತ ಸೀತನೂರ್, ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕುಪೇಂದ್ರ, ನ್ಯಾಯವಾದಿ ಶಿವಪುತ್ರ ಬರೋಡೆ, ಮಾಜಿ ಮಹಾಪೌರ ಸಂಜಯ್ ಸಿಂಗ್, ಜೋಡಬಸವೇಶ್ವರ ದೇವಾಲಯದ ಅಧ್ಯಕ್ಷ ನೀಲಕಂಠರಾವ ಪೊಲೀಸ್ ಪಾಟೀಲ್, ಸೇರಿದಂತೆ ಅನೇಕರಿದ್ದರು.

ಶಿವಲಿಂಗಯ್ಯ ಮಠಪತಿ, ಬಲಬಿಮ ಬಿರಾದಾರ, ಶಿವಪುತ್ರ ಪಾಟೀಲ್, ಶಾಂತಕುಮಾರ ಬಿರಾದಾರ, ರಾಜಕುಮಾರ್ ಬಿರಾದಾರ, ಬಲವಂತ ಉದನೂರ, ಮಲ್ಲಿನಾಥ ಬಿರಾದಾರ, ಲಕ್ಷ್ಮಣ ಪೂಜಾರಿ, ಹನುಮಂತರಾಯ ಕಪನೂರ,ಶಾಂತಪ್ಪ ಪಾಟೀಲ್, ರಾಜು ನವಲದಿ, ಹನುಮಂತರಾವ್ ಬಿರಾದಾರ, ಸುಭಾಷ್ ಮೂಲೆಗೆ, ಹಜರತ್ ಸಾಬ್ ಸೇರಿದಂತೆ ಗ್ರಾಮದ ಮುಖಂಡರು ಇದ್ದರು.



# ನಿಗದಿತ ಬೆಂಬಲ ಬೆಲೆಗೆ ಆಗ್ರಹಿಸಿ ವಿಜಯಪುರ ರಾಜ್ಯ ಹೆದ್ದಾರಿ ಬಂದ ಮಾಡಿ ಪ್ರತಿಭಟನೆ ಮಾಡಿದ ರೈತರು

ಜಮಖಂಡಿ:ನ.05: ತಾಲೂಕಿನ ಚಿಕ್ಕಲಕಿ ಕ್ರಾಸ್ ಹತ್ತಿರ ಕೃಷ್ಣಾ ತೀರ ರೈತರ ಕಬ್ಬು ಬೆಳೆಗಾರರ ಸಂಘ ಹಸಿರು ಸೇನೆ ಸೇರಿದಂತೆ ವಿವಿಧ ರೈತ ಹೋರಾಟ ಸಂಘಗಳ ಸಹಯೋಗದಲ್ಲಿ ಇಂದು ಸಾವಿರಾರು ರೈತರು ಬೀದಿಗಿಳಿದು ಉಗ್ರವಾದ ಪ್ರತಿಭಟನೆಯನ್ನು ಬೆಳಗಿನಿಂದ ಸಂಜೆಯರೆಗೆ ಅವ್ಯಾಹತವಾಗಿ ಮಾಡಿದ್ದಾರು.



ಪ್ರತಿ ಭಟನೆಯಲ್ಲಿ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಮಾತನಾಡಿ ಕಬ್ಬಿಗೆ ಯೋಗ್ಯ ಬೆಲೆ ನೀಡಬೇಕು ಎಂದು ಒತ್ತಾಯಿಸಿ ಈ ಪ್ರತಿಭಟನೆ ಯೋಗ್ಯವಾಗಿದೆ ನದೀ ತಿರದಲ್ಲಿ ಗುಣಮಟ್ಟದ ಕಬ್ಬು ಬೆಳೆಯುತ್ತಾರೆ ಇಂತಹ ಕಬ್ಬು ಮತ್ತೆಲ್ಲಿಯೂ ಸಹ ಸಿಗಲಾರದು ಕಬ್ಬಿಗೆ ಬೆಲೆ ನಿಗದಿ ಮಾಡುವದು ಸರಕಾರದ ಆದ್ಯ ಕರ್ತವ್ಯವಾಗಿದೆ ಎಂದರು,

ಕಳೆದೆರಡು ದಿನ ಹಿಂದೆ ಗುರ್ಲಾಪೂರ ಹತ್ತಿರ ನಡೆದ ಪ್ರತಿಭಟನೆಯಲ್ಲಿ ಬೆಳಗಾವಿ ಜಿಲ್ಲೆಯ ಅಧಿಕಾರಿಗಳು 3200 ರೂಗಳು ನೀಡಿಸುತ್ತೇವೆಂದು ಜಿಲ್ಲಾಧಿಕಾರಿಗಳು ತಿಳಿಸಿದರೂ ಸಹ ರೈತರು ತಮ್ಮ ಪಟ್ಟು ಬಿಡದೆ 3500 ನೀಡುವ ವರೆಗೆ ರೈತರು ಪ್ರತಿಭಟನೆಯನ್ನು ಮುಂದುವರೆಸಿದರು.

ಕಾಖಾರ್ನೆ ಮಾಲೀಕರು ಜಿಲ್ಲಾಧಿಕಾರಿಗಳ ಜೊತೆಗೆ ಮಾತು ಕತೆಯನ್ನು ಮಾಡುತ್ತಿದ್ದಾರೆ. ಸರಕಾರವನ್ನು ನಡೆಸುವ ಶಾಸಕರು ಸಚಿವರು ಕಾರ್ಖಾನೆಯನ್ನು ನಡೆಸುತ್ತಿದ್ದಾರೆ ಆದರಿಂದ ರೈತರ ಗೋಳು ಕೇಳುವವರೇ ಇಲ್ಲ ರೈತರು ಇಂದು ಜೀವದ ಅರಿವಿಲ್ಲದೇ ದುಡಿಯುತ್ತಾರೆ, ಅಂತಹ ಬೆಳೆಗೆ ಬೆಂಬಲ ನೀಡಲು ಆಗದಿದ್ದರೆ ಸರಕಾರವು ಇದ್ದರೆಷ್ಟು ಹೋದರೆಷ್ಟ. ಎಂದರು.

ಹೋರಾಟದಲ್ಲಿ ಪಕ್ಷಾತೀತವಾಗಿ ಇದ್ದಾರೆ ಆದರೆ ಎಲ್ಲರೂ ತಮ್ಮ ಹಿತವನ್ನು ಕಾಣುತ್ತಿದ್ದಾರೆ ಆದರೆ ರೈತರ ಕಷ್ಟಕ್ಕೆ ಸ್ಪಂದಿಸಿಲ್ಲ ಓರ್ವ ಮಾಲೀಕ ಒಂದರಿಂದ ಹತ್ತು ಉದ್ಯಮ ಆದರೆ ರೈತರ ಒಂದು ಎಕರೆ ಇದ್ದರೆ ಅದನ್ನು ಮಾರಲು ಮುಂದಾಗುತ್ತಾನೆ ಕಾರ್ಖಾನಯ ಮಾಲೀಕರು ಕಬ್ಬಿನಿಂದ ಬಂದ ಲಾಭವನ್ನು ರೈಥರಿಗೂ ನೀಡಬೇಕು ಎಂದು ಒತ್ತಾಯಿಸಿದರು.

ಮಹೇಶ ದೇಶಪಾಂಡೆ ಕಳೆದ 15 ದಿನದಿಂದ ಹೋರಾಟ ನಡೆಯುತ್ತಿದೆ ಆದರೆ ಯಾವ ರಾಜಕರಣಿಯೂ ಸಹ ನಮ್ಮತ್ತ ನೋಡುತ್ತಿಲ್ಲ ಇಂದು ಅತೀ ದೊಡ್ಡ ಮಟ್ಟದ ರೈತರ ಹೋರಾಟ ನಡೆದಿದೆ. ಕಬ್ಬಿಗೆ ಬೆಂಬಲ ಬೆಲೆ ನೀಡದ ಹೊರತು ನಾವು ಪ್ರತಿಭಟನೆ ಹಿಂತೆಗೆಯುವದಿಲ್ಲ. ಕಾರ್ಖಾನೆಯವರು 10 ರಷ್ಟು ಲಾಭಾಂಶ ಪಡೆದರೆ ಸರಕಾರವು ದುಪಟ್ಟಟ್ಟು ಲಾಭ ಗಳಿಸುತ್ತದೆ. ನಿನ್ನೆ ಬೆಳಗಾವಿ ಜಿಲ್ಲಾಧಿಕಾರಿಗಳು ರೈತರು ಮನವಲಿಸಲು ನೋಡಿದ್ದಾರೆ ಆದರೆ ರೈತರು ಅದಕ್ಕೆ ಸೊಪ್ಪು ಹಾಕಿಲ್ಲ ಎಂದರು.

ರೈತ ಮುಖಂಡ ಬಸವರಾಜ ಸಿಂಧೂರ ಮಾತನಾಡಿ ನಾವಿಂದು ರಾಜಕೀಯೇತರವಾಗಿ ಪ್ರತಿಭಟನೆ ಮಾಡುತ್ತಿದ್ದೇವೆ. ರೈತರಿಗೆ ಹೊಟ್ಟೆಯ ಮೇಲೆ ಹೊಡೆಯಬೇಡಿ ರೈತರ ಬೆಳೆಗೆ ಯೋಗ್ಯ ಬೆಲೆ ಯಾವುದೆ ಸರಕಾರವೂ ಸಹ ನೀಡಿಲ್ಲ ನೀಡುತ್ತಿಲ್ಲ. ರಾಜ್ಯದ್ಯಾಂತ ಪ್ರತಿಭಟನೆಯನ್ನು ಮಾಡಿದರೂ ಸಹ ಕಿಂಚಿತ್ತ ಲಾಭವಿಲ್ಲ ದೇಶದಲ್ಲಿ ಕಬ್ಬು ಬೆಳೆಗಾರರ ಎರಡನೇ ರಾಜ್ಯವಾಗಿದೆ. ಕೇಂದ್ರಸರಕಾರವು ಮುಂದೆ ಬಂದು ರಾಜ್ಯ ಸರಕಾರಗಳಿಗೆ ಸೂಚನೆ ನಿಡಬೇಕು ರೈತರಿಗೆ ಸ್ಪಂದಿಸಬೇಕು ಎಂದರು.

# ಕನ್ನಡದ ನೆಲದಲ್ಲಿಯೇ ಕನ್ನಡದ ಉಳಿವಿಗಾಗಿ ಸಂಘಟನೆಗಳ ಹುಟ್ಟು ದುರದೃಷ್ಟಕರ:ಸುರೇಶ ಜತ್ತಿ ವಿಷಾದ

ವಿಜಯಪುರ,ನ.05: ಕನ್ನಡ ಭಾಷೆ ಅತ್ಯಂತ ಶ್ರೀಮಂತವಾದುದು. ಎರಡು ಸಾವಿರ ವರ್ಷಗಳಷ್ಟು ಪುರಾತನ ಇತಿಹಾಸವನ್ನು ಹೊಂದಿದ ಶ್ರೇಷ್ಠ ಭಾಷೆಯಾಗಿದೆ ಎಂದು ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸಿನ ಸಂಸ್ಥಾಪಕ ಅಧ್ಯಕ್ಷ, ಹೋರಾಟಗಾರ ಸುರೇಶ್ ಎಸ್. ಜತ್ತಿ ಅವರು ಹೇಳಿದರು.

ತಿಕೋಟಾ ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮಹಾ ವಿದ್ಯಾಲಯದ ಕನ್ನಡ ವಿಭಾಗ ಹಾಗೂ ಸಾಂಸ್ಕೃತಿಕ ಸಮಿತಿ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ರಾಜ್ಯೋತ್ಸವ ಸಮಾರಂಭ ಒಂದು ದಿನಕ್ಕೆ ಸೀಮಿತವಾಗದೆ ಅದು ನಿತ್ಯ ನಿರಂತರವೂ ನಮ್ಮ ಜೀವಾಳವಾಗಬೇಕಿದೆ. ಹರಿದು ಹಂಚಿ ಹೋಗಿದ್ದ ಕನ್ನಡಿಗರನ್ನು ಒಂದೆಡೆ ಸೇರಿಸಲು ಶ್ರಮಿಸಿದ ಅನೇಕ ಹೋರಾಟಗಾರರ ಜೀವನ ನಮ್ಮೆಲ್ಲರಿಗೂ ಆದರ್ಶ ವಾಗಿದೆ. ಕನ್ನಡದ ಕುಲ ಪುರೋಹಿತ ಆಲೂರು ವೆಂಕಟರಾಯರ ಆದಿಯಾಗಿ ಸಿದ್ದಪ್ಪ ಕಂಬಳಿ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅ.ನ. ಕೃಷ್ಣರಾವ್, ವಿ.ಕೃ.ಗೋಕಾಕ,ಹುಯ್ಲುಗೋಳ್ ನಾರಾಯಣ ರಾವ್ ಮುಂತಾದ ಕನ್ನಡ ಸೇವಕರ ಅವಿರತ ಶ್ರಮದಿಂದ ಏಕೀಕರಣದ ಚಳುವಳಿ ಯಶಸ್ವಿಯಾಯಿತು. ಆದರೆ ದುರ್ದೈವವಶಾತ್ ಕನ್ನಡ ನಾಡಿನಲ್ಲಿಯೇ ಕನ್ನಡದ ರಕ್ಷಣೆಗಾಗಿ ಸಂಘಟನೆಗಳು ಹುಟ್ಟಿಕೊಳ್ಳುವ ಪರಿಸ್ಥಿತಿ ಇಂದು ನಿರ್ಮಾಣವಾಗಿರುವುದು ಖೇದಕರ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಕನ್ನಡದ ಸಾಹಿತ್ಯ ಪ್ರಾಚೀನ ಹಳೆಗನ್ನಡ ನಡುಗನ್ನಡ ಹೊಸಗನ್ನಡ ಹೀಗೆ ವಿಧ ವಿಧದ ಸಾಹಿತ್ಯ ಹುಟ್ಟಿಕೊಳ್ಳುವ ಮೂಲಕ ಕನ್ನಡ ಸಾರಸ್ವತ ಲೋಕ ಶ್ರೀಮಂತಗೊಂಡಿದೆ. ಇದಕ್ಕೂ ಮುನ್ನ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಪ್ರೊ. ಬಿ. ಎಸ್. ಬೆಳಗಲಿ ಅವರು ಮಾತನಾಡಿ, ಇವತ್ತು ಕನ್ನಡದ ಹಬ್ಬ ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲ; ಜಗತ್ತಿನ ಕುವೈತ್ ಕೆನಡಾ ಇಂಗ್ಲೆಂಡ್ ಅಮೇರಿಕಾ ರಷ್ಯಾ ಇವುಗಳು ಅಲ್ಲದೆ ಬೇರೆ ಬೇರೆ ರಾಷ್ಟ್ರಗಳಲ್ಲಿಯೂ ಕನ್ನಡಿಗರು ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಇಂತಹ ಸಂಭ್ರಮದ ಆಚರಣೆ ಕನ್ನಡದ ವಿಸ್ತಾರವನ್ನು ವೈಭವವನ್ನು ಎತ್ತಿ ತೋರಿಸುತ್ತದೆ. ಇಂದಿನ ಯುವ ಪೀಳಿಗೆ ಕನ್ನಡದ ಬಗ್ಗೆ ಪ್ರೀತಿ, ಅಭಿಮಾನ, ಗೌರವ ಹೊಂದುವುದು ಅನಿವಾರ್ಯವಾಗಿದೆ. ಕಾಲೇಜುಗಳಲ್ಲಿ ಓದುತ್ತಿರುವ ಬಹುತೇಕ ವಿದ್ಯಾರ್ಥಿಗಳಿಗೆ ಸ್ಪಷ್ಟವಾದ ಕನ್ನಡವನ್ನು ಓದಲು ಸಹ ಬಾರದಿರುವುದು ಕನ್ನಡದ ಬಗೆಗೆ ಇರುವ ತಾತ್ಸಾರ ಮನೋಭಾವನೆ ಎದ್ದು ಕಾಣುತ್ತದೆ ಎಂದರು. ಕನ್ನಡ ಉಪನ್ಯಾಸಕ ಡಾ. ಸಂತೋಷ ನವಲಗುಂದ ಪ್ರಾಸ್ತಾವಿಕವಾಗಿ ಮಾತನಾಡಿ, ಕನ್ನಡ ಭಾಷೆ, ನಾಡು, ಜಲ, ಗಡಿ ಇವುಗಳ ರಕ್ಷಣೆ ಅಷ್ಟೇ ಕನ್ನಡದ ಸೇವೆ ಆಗುವುದಿಲ್ಲ. ಕನ್ನಡದ ಅಭಿಮಾನವೆಂದರೆ ನಮ್ಮ ಉಸಿರು, ನಮ್ಮ ಹೆಸರು, ನಮ್ಮ ನಡೆ ನುಡಿ ಕನ್ನಡವಾಗಬೇಕಿದೆ. ನಿತ್ಯ ಜೀವನದಲ್ಲಿ ಕನ್ನಡದ ಶುದ್ಧ ಬಳಕೆಯಿಂದ ಕನ್ನಡಕ್ಕೆ ನಾವು ಕೊಡುವ ಶ್ರೇಷ್ಠ ಗೌರವ ಎನಿಸುತ್ತದೆ. ಹೀಗಾಗಿ ಕನ್ನಡ ನಾಡಿನಲ್ಲಿ ಕನ್ನಡವು ಮೆರೆಯಬೇಕು. ಅದು ಎಲ್ಲರಲ್ಲೂ ಮನೆ ಮಾಡಬೇಕು. ಅಂದಾಗ ಕನ್ನಡವು ಉಳಿಯಲು ಸಾಧ್ಯವಾಗುತ್ತದೆ ಎಂದರು. ಇದೇ ವೇಳೆ, ಕನ್ನಡ ರಾಜ್ಯೋತ್ಸವ ನಿಮಿತ್ಯ ಏರ್ಪಡಿಸಿದ್ದ ಭಾಷಣ, ಭಾವಗೀತೆ, ಪ್ರಬಂಧ, ಸ್ವರಚಿತ ಕಾವ್ಯ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.









# ನವ್ಹೆಂಬರ್ ಕನ್ನಡಿಗರಾಗದೆ, ನಿತ್ಯ ಕನ್ನಡಿಗರಾಗೋಣ



ಕಲಬುರಗಿ.ನ.05:ಕನ್ನಡ ಕಟ್ಟುವ ಕಾರ್ಯ ನಿರಂತರವಾಗಿ ಜರುಗಬೇಕು. ಕನ್ನಡ ಕಟ್ಟುವ ಕಾರ್ಯ ಎಲ್ಲರು ಮಾಡಬೇಕು ಮತ್ತು ಇದು ನಿರಂತರವಾಗಿರಬೇಕು. ಕನ್ನಡ ಕಟ್ಟಿದ ವೀರ ಕನ್ನಡಿಗರ ಶ್ರಮ ಮರೆಯಬಾರದು. ಎಲ್ಲರಲ್ಲಿ ಕನ್ನಡದ ಬಗ್ಗೆ ಗೌರವ, ಸ್ವಾಭಿಮಾನ ಮೂಡಲಿ. ಕನ್ನಡವು ನವೆಂಬರ್ ಮಾತ್ರ ಸೀಮಿತಗೊಳಿಸದೆ, ನಿತ್ಯ ಕನ್ನಡಿಗರಾಗೋಣ ಎಂದು ಶಹಾಬಾದ ತಾಲೂಕಾ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮರಲಿಂಗ ಯಾದಗಿರಿ ಮಾರ್ಮಿಕವಾಗಿ ಹೇಳಿದರು.

ಶಹಾಬಾದ ತಾಲೂಕಿನ ಭಂಕೂರಿನ ಸ್ಪರ್ಧಾ ಸ್ಪೂರ್ತಿ ಶಾಲೆಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಸೋಮವಾರ ಏರ್ಪಡಿಸಿದ್ದ "ರಾಜ್ಯೋತ್ಸವ ಮಾಸಾಚರಣೆಯ ಸರಣಿ ಉಪನ್ಯಾಸ ಕಾರ್ಯಕ್ರಮ"ವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಕನ್ನಡ ನಾಡಿನಲ್ಲಿರುವ ಎಲ್ಲರೂ ಜಾತಿ, ಧರ್ಮ, ಪ್ರದೇಶ ಮೀರಿ ನಾವೆಲ್ಲರೂ ಕನ್ನಡಿಗರು ಒಂದೇ ಎಂಬ ಮನೋಭಾವ ಮೈಗೂಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಕನ್ನಡದ ಬಗ್ಗೆ ಅಭಿಮಾನ ಶೂನ್ಯರಾಗದೆ, ನಾಡು-ನುಡಿಯ ಬಗ್ಗೆ ಅಪಾರವಾದ ಗೌರವ, ಸ್ವಾಭಿಮಾನ ಬೆಳೆಸಿಕೊಂಡು ಕನ್ನಡದ ಸೇವೆ ಮಾಡಬೇಕು ಎಂದರು.

ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ್ ಮಾತನಾಡಿ, ಕನ್ನಡದಲ್ಲಿ ಬರೆಯುವ, ಓದುವ, ಮಾತನಾಡುವ ಕನ್ನಡತ ಪ್ರವೃತ್ತಿ ಅಳವಡಿಕೊಳ್ಳಬೇಕು. ಕನ್ನಡ ನಮ್ಮ ತಾಯಿ ಭಾಷೆಯಾಗಿದ್ದು, ಅದನ್ನು ಮರೆತರೆ ಹೆತ್ತ ತಾಯಿಯನ್ನು ಮರೆತಂತಾಗುತ್ತದೆ. ರಾಷ್ಟದ ಅಭಿವೃದ್ಧಿಯಲ್ಲಿ ಕನ್ನಡ ನಾಡಿನ ಕೊಡುಗೆ ಅಪಾರವಾಗಿದೆ. ಕನ್ನಡ ನಾಡು-ನುಡಿಯ ಜನ ಜಾಗೃತಿ ಮೂಡಿಸುವ ಉದ್ದೇಶದಿಂದ ನಮ್ಮ ಬಳಗದಿಂದ ಇಡೀ ತಿಂಗಳು ಸರಣಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಮಹೇಶ್ ಧರಿ, ಉಪನ್ಯಾಸಕ ಶಶಿಕಾಂತ ಮಾಡಿವಾಳ, ಸಮಾಜ ಸೇವಕರಾದ ಚಂದ್ರಕಾಂತ ಮಡಿವಾಳ, ಶಾಲೆಯ ಮುಖ್ಯ ಶಿಕ್ಷಕಿ ಕವಿತಾ ಜಾಧವ, ಶಿಕ್ಷಕಯರಾದ ಯೇಸುನಾಥ ಹುಲಿಯರ್, ನಾಗರತ್ನ ಮಠಪತಿ, ಮಲ್ಲಮ್ಮ, ಸೇವಕಿ ನೀಲಮ್ಮ ವಗ್ಗನ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು

# ತಾಲೂಕಿನ ರೈತರು ಹೆಚ್ಚಿನ ಪ್ರಮಾಣದ ಹತ್ತಿ ಬೆಳೆಯುತ್ತಿರುವುದು ಹೆಮ್ಮೆಯ ಸಂಗತಿ ; ಎಂ.ವೈ.ಪಾಟೀಲ

ಅಫಜಲಪುರ:ನ.05: ಇಡೀ ಜಿಲ್ಲೆಯಲ್ಲಿ ಅತೀ ಹೆಚ್ಚು ಹತ್ತಿ ಬೆಳೆಯನ್ನು ನಮ್ಮ ಮತಕ್ಷೇತ್ರದ ರೈತರು ಬೆಳೆಯುತ್ತಿರುವುದು ಶ್ಲಾಘನೀಯವಾದದ್ದು, ಹೀಗಾಗಿ ಹೆಚ್ಚು ಹತ್ತಿ ಬೆಳೆಯುವುದರಿಂದ ಕಾರ್ಖಾನೆಗಳು ಸಹ ಹೆಚ್ಚಾಚ್ಚಾಗಿ ಈ ಭಾಗದಲ್ಲಿ ಪ್ರಾರಂಭವಾಗಿವೆ. ಇದರಿಂದ ಉದ್ಯೋಗ ಸೃಷ್ಟಿಯು ಆಗಲಿದೆ ಎಂದು ಶಾಸಕ ಎಂ.ವೈ.ಪಾಟೀಲ್ ತಿಳಿಸಿದರು.

ಕಲಬುರಗಿ ರಸ್ತೆಗೆ ಹೊಂದಿಕೊಂಡಿರುವ ಕಿಸಾನ್ ಕಾಟನ್ ಇಂಡಸ್ಟ್ರೀಸ್ ನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ಪ್ರಾರಂಭಿಸಲಾದ ಹತ್ತಿ ಖರೀದಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಅಫಜಲಪುರ ತಾಲೂಕಿನಲ್ಲಿ 6 ಹತ್ತಿ ಖರೀದಿ ಕೇಂದ್ರಗಳನ್ನು ಸರ್ಕಾರ ಹತ್ತಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಲು ಸೂಚಿಸಿದ್ದು,

ಹೀಗಾಗಿ ಮೊದಲನೇ ಹಂತವಾಗಿ ಎರಡು ಹತ್ತಿ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಲಾಗಿದೆ. ಹತ್ತಿ ಬೆಳೆದ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು.

2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಪ್ರತಿ ಕ್ವಿಂಟಲ್ ಗೆ 7710 ರೂ.ದಿಂದ 8110 ರೂ. ಬೆಲೆ ನಿಗದಿಪಡಿಸಲಾಗಿದೆ ಎಂದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಕಾರ್ಯದರ್ಶಿ ಸಂತೋಷ್ ಬುಡಗೆ ಮಾತನಾಡಿ,2025-26ನೇ ಸಾಲಿನ ಕೇಂದ್ರ ಸರ್ಕಾರದ ಭಾರತೀಯ ಹತ್ತಿ ನಿಗಮ ವತಿಯಿಂದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹತ್ತಿ ಮಾರಾಟ ಮಾಡಲು ಗೂಗಲ್ ಪ್ಲೇ ನಲ್ಲಿ ಲಭ್ಯವಿರುವ ಕಪಾಸ ಕಿಸಾನ್ ಮೊಬೈಲ್ ಅಪ್ಲಿಕೇಶನ್ ಮೂಲಕ ನೊಂದಣಿ ಮಾಡಿಕೊಳ್ಳಲು ಡಿಸೆಂಬರ್ 31 ಕೊನೆಯ ದಿನವಾಗಿದೆ. ಭೂ ದಾಖಲೆಗಳು, ಕಂದಾಯ ಇಲಾಖೆಯಿಂದ ಸರಿಯಾಗಿ ಪ್ರಮಾಣೀಕರಿಸಲ್ಪಟ್ಟ ಹತ್ತಿ ಬೆಳೆಯ ದಾಖಲೆ, ಆಧಾರ್ ಕಾರ್ಡ್, ಪೋಟೋ,ಎ???ಡಿ ಸಂಖ್ಯೆಯ ದಾಖಲೆ ಸಲ್ಲಿಸಬೇಕು ಎಂದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಮತೀನ ಪಟೇಲ್, ರಮೇಶ್ ಪೂಜಾರಿ,ಶರಣು ಕುಂಬಾರ, ಶಿವಾನಂದ ಗಾಡಿ ಸಾಹುಕಾರ,ನಾನಾಗೌಡ ಪಾಟೀಲ್, ತಹಶೀಲ್ದಾರ್ ಸಂಜೀವ ಕುಮಾರ ದಾಸರ,ಲೆಕ್ಕಾಧಿಕಾರಿ ಮಹಾಂತಪ್ಪ,ಸಿಸಿಐ ಅಧಿಕಾರ ರಾಜಶೇಖರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



# ಸಕ್ಕರೆ ಕಾರ್ಖಾನೆಗಳು ದರ ನಿಗದಿಮಾಡಿ ಘೋಷಿಸಿ ಕಾರ್ಖಾನೆ ಆರಂಭಕ್ಕೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಸೂಚನೆ



ವಿಜಯಪುರ,ನ.05: ಜಿಲ್ಲೆಯಲ್ಲಿರುವ ಕಬ್ಬು ನುರಿಸುವ ಸಕ್ಕರೆ ಕಾರ್ಖಾನೆಗಳು ಎರಡು ದಿನಗಳಲ್ಲಿ ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಸಾಗಾಣಿಕೆ ಮತ್ತು ಕಟಾವು ದರವನ್ನು ಹೊರತುಪಡಿಸಿ ರೈತರಿಗೆ ಪಾವತಿಸಬೇಕಾಗುವ ದರವನ್ನು ನಿಗದಿಗೊಳಿಸಿ ಘೋಷಿಸಿ ಸಕ್ಕರೆ ಕಾರ್ಖಾನೆ ಆರಂಭಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಡಾ.ಆನಂದ ಕೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಸಕ್ಕರೆ ಕಾರ್ಖಾನೆ ಮಾಲೀಕರು ಹಾಗೂ ರೈತರೊಂದಿಗೆ ಏರ್ಪಡಿಸಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಜಿಲ್ಲೆಯಲ್ಲಿ 10 ಸಕ್ಕರೆ ಕಾರ್ಖಾನೆಗಳಿದ್ದು, ಕೇವಲ ಒಂದು ಕಾರ್ಖಾನೆ ಮಾತ್ರ ದರ ನಿಗದಿಪಡಿಸಿದ್ದು, ಇನ್ನುಳಿದ ಕಾರ್ಖಾನೆಗಳು ಆದಷ್ಟು ಬೇಗ ಸಮರ್ಪಕ ದರ ನಿಗದಿಪಡಿಸಿ ಸಕ್ಕರೆ ಕಾರ್ಖಾನೆಗಳನ್ನು ಕಾರ್ಯಾರಂಭಿಸುವಂತೆ ಸೂಚಿಸಿದ ಅವರು, ರೈತರಿಗೆ ಪಾವತಿಯಾಗಬೇಕಾದ ಈ ಹಿಂದಿನ ಯಾವುದೇ ಬಿಲ್ಲಗಳನ್ನು ಬಾಕಿ ಉಳಿಸಿಕೊಳ್ಳದೇ ಶೀಘ್ರವಾಗಿ ಇತ್ಯರ್ಥಪಡಿಸಿ ಪಾವತಿಗೆ ಕ್ರಮವಹಿಸಬೇಕು. ಈ ಹಂಗಾಮಿನಲ್ಲಿ ಸರ್ಕಾರದ ಮಾನದಂಡವನ್ನು ಬಳಸಿಕೊಂಡು ತಮ್ಮ ಅಧಿಕೃತ ಕಾರ್ಖಾನೆಯು ಲೆಟರ್ ಹೆ???ನಲ್ಲಿ ಕಬ್ಬು ನುರಿಸುವ ಕುರಿತು ಪತ್ರ ನೀಡಿ ಕಾರ್ಖಾನೆಗಳನ್ನು ಆರಂಭಿಸುವಂತೆ ಅವರು ಸೂಚನೆ ನೀಡಿದರು.

ರೈತ ಮುಖಂಡರು ತಮ್ಮ ಸಮಸ್ಯೆಗಳ ಕುರಿತು ಜಿಲ್ಲಾಡಳಿತದ ಗಮನಕ್ಕೆ ತಂದಿದ್ದು, ಬಹುತೇಕ ಸ್ಥಳೀಯವಾಗಿರುವ ಸಮಸ್ಯೆ ಪರಿಹರಿಸಲಾಗುವುದು. ವಾಯು ಮಾಲಿನ್ಯ ನೈರ್ಮಲ್ಯ ಪರಿಶೀಲನೆ ನಡೆಸಿದ ವರದಿ ಸಲ್ಲಿಸಿ, ಸಕ್ಕರೆ ಕಾರ್ಖಾನೆಗಳು ಕೊಳಚೆ ನೀರು ಹರಿಬಿಡದಂತೆ ನೋಡಿಕೊಂಡು ಮಾಲಿನ್ಯವಾಗದಂತೆ ನಿಗಾವಹಿಸಬೇಕು. ಸಕ್ಕರೆ ಕಾರ್ಖಾನೆಗಳಲ್ಲಿ ತೂಕ ಮಾಪನದಲ್ಲಿ ಯಾವುದೇ ದೂರಿಗೆ ಆಸ್ಪದ ನೀಡದಂತೆ ನಿಯಮಾನುಸಾರ ಕ್ರಮವಹಿಸಬೇಕು. ಎಲ್ಲಾ ಕಾರ್ಖಾನೆಗಳಲ್ಲಿ ಡಿಜಿಟಲ್ ತೂಕದ ಯಂತ್ರಗಳನ್ನು ಅಳವಡಿಸಿರಬೇಕು ಸಕ್ಕರೆ ಕಾರ್ಖಾನೆಗಳು ಅಳವಡಿಸಿಕೊಂಡಿರುವ ಡಿಜಿಟಲ್ ತೂಕ ಯಂತ್ರ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಕುರಿತಾಗಿ ಆಹಾರ ಇಲಾಖೆ, ಕಂದಾಯ ಇಲಾಖೆ ಹಾಗೂ ಇಬ್ಬರು ರೈತರನ್ನೊಳಗೊಂಡು ಸಮಿತಿ ರಚಿಸಲಾಗಿದೆ. ಸಮಿತಿಯು ಪ್ರತಿ ಹದಿನೈದು ದಿನಕ್ಕೊಮ್ಮೆ ಜಿಲ್ಲೆಯ ಎಲ್ಲಾ ಕಾರ್ಖಾನೆಗಳಿಗೆ ತೆರಳಿ ಪರಿಶೀಲನೆ ನಡೆಸಬೇಕು. ಪರಿಶೀಲನಾ ಸಮಗ್ರ ವರದಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸಲಿದೆ. ತೂಕದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಅಂತಹ ಕಾರ್ಖಾನೆಗಳ ವಿರುದ್ಧ ಕಾನೂನಿನ ಕ್ರಮವಹಿಸಲಾಗುವುದು ಎಂದು ಅವರು ಹೇಳಿದರು.ರೈತರು ಕಬ್ಬು ಪೂರೈಸಿದ ನಿಗದಿತ ಕಾಲಾವಧಿಯೊಳಗೆ ರೈತರಿಗೆ ಕಬ್ಬಿನ ಬಿಲ್ಲು ಪಾವತಿಯಾಗುವಂತೆ ನೋಡಿಕೊಳ್ಳಬೇಕು. ಸಕ್ಕರೆ ಕಾರ್ಖಾನೆಗಳಲ್ಲಿ ಪ್ರತಿ ದಿನ ಕಾರ್ಖಾನೆಗೆ ಬರುವ ಕಬ್ಬು ತುಂಬಿದ ವಾಹನಗಳ ಕುರಿತ ಮಾಹಿತಿ ಲಾಗ್ ಬುಕ್‌ನಲ್ಲಿ ದಾಖಲಿಸಬೇಕು. ಕಬ್ಬಿನ ಕಾಸ್ಟ್ ಆಫ್ ಕಲ್ಟಿವೇಶನ್ ಲಾಭಾಂಶ ಕುರಿತು 15 ಅಂಶಗಳ ಕಬ್ಬಿನ ದರ ನಿಗದಿಪಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸಕ್ಕರೆ ಕಾರ್ಖಾನೆಗಳು ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಕಾರ್ಖಾನೆಗಳ ಮಾಲೀಕರು ಒಂದು ನಿಖರತೆಯಿಂದ ದರ ನಿಗದಿಪಡಿಸಿ ಘೋಷಿಸಿ ಕಾರ್ಖಾನೆ ಆರಂಭಿಸಬೇಕು.

# ಸಕ್ಕರೆ ಕಾರ್ಖಾನೆ-ಕಬ್ಬು ಬೆಳೆಗಾರರೊಂದಿಗೆ ಸಭೆ:ಎರಡು ದಿನದಲ್ಲಿ ಕಾರ್ಖಾನೆಗಳು ಏಕರೂಪ ದರ ನಿಗದಿಪಡಿಸಬೇಕು:ಬಿ.ಆರ್.ಪಾಟೀಲ

ಕಲಬುರಗಿ,ನ.05:ಪ್ರಸಕ್ತ 2025-26ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಬೆಳೆಯಲಾದ ಕಬ್ಬು ಇದೀಗ ಕಟಾವು ಮಾಡಬೇಕಿರುವ ಹಿನ್ನೆಲೆಯಲ್ಲಿ ರೈತರ ಹಿತದೃಷ್ಟಿಯಿಂದ ಕಲಬುರಗಿ ಜಿಲ್ಲೆಯ ಎಲ್ಲಾ ಸಕ್ಕರೆ ಕಾರ್ಖಾನೆಗಳು ಎರಡು ದಿನದಲ್ಲಿ ಏಕರೂಪ ದರ ನಿಗದಿಪಡಿಸಬೇಕು ಎಂದು ಕರ್ನಾಟಕ ರಾಜ್ಯ ನೀತಿ ಮತ್ತು ಯೀಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಸೂಚನೆ ನೀಡಿದರು.

ಸೋಮವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ, ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳು ಹಾಗೂ ಕಬ್ಬು ಬೆಳೆಗಾರರ ರೈತ ಮುಖಂಡರೊಂದಿಗೆ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ ಅವರು, ದರ ನಿಗದಿ ಮಾಡದೆ ಕಬ್ಬು ನುರಿಸುವ ಕಾರ್ಯಕ್ಕೆ ಅವಕಾಶ ನೀಡುವುದಿಲ್ಲ ಎಂದು ರೈತರು ಪಟ್ಟು ಹಿಡಿದಿರುವುದರಿಂದ ಕಾರ್ಖಾನೆಗಳು ವಿತ್ತಂಡವಾದ ಬಿಟ್ಟು ರೈತರಿಗೆ ನ್ಯಾಯಯುತ ದರ ಕನಿಷ್ಟ 3,000 ರೂ. ಘೋಷಿಸಿ ಕಬ್ಬು ನುರಿಸುವ ಕೆಲಸ ಆರಂಭಿಸಬೇಕು ಎಂದರು.

ಈಗಾಗಲೆ ಬೆಳಗಾವಿಯಲ್ಲಿ ಪ್ರತಿ ಟನ್ ಗೆ 3,400 ರೂ. ದರ ನಿಗದಿ ಮಾಡಿ ಕಾರ್ಖಾನೆಗಳು ಘೋಷಿಸಿವೆ. ಅದೇ ರೀತಿ ವಿಜಯಪುರ, ಬಾಗಲಕೋಟೆ, ಕಾರವಾರ ನಲ್ಲಿ ಘೋಷಿಸಲಾಗಿದೆ. ಕಳೆದ ವರ್ಷ ಇಲ್ಲಿಯೂ 2,700 ರೂ. ಏಕರೂಪದ ದರ ನಿಗದಿ ಮಾಡಿದ್ದೀರಿ, ಈ ವರ್ಷ ಯಾಕೆ ಇದು ಸಾಧ್ಯವಾಗುತ್ತಿಲ್ಲ ಎಂದು ಕಾರ್ಖಾನೆಗಳ ಪ್ರತಿನಿಧಿಗಳನ್ನು ಪ್ರಶ್ನಿಸಿದ ಅವರು, ನಿರ್ಣಯ ತೆಗೆದುಕೊಳ್ಳುವ ಕಾರ್ಖಾನೆಯ ಪ್ರಮುಖ ಹಂತದ ಅಧಿಕಾರಿಗಳು ಸಭೆಗೆ ಬಾರದಿರುವುದಕ್ಕೆ ಬೇಸರ ವ್ಯಕ್ತಪಡಿಸಿ ಕಾರ್ಖಾನೆಗಳು ಇಂತಹ ರೈತ ವಿರೋಧಿ ಧೋರಣೆ ಬಿಡಬೇಕು ಎಂದರು.

ಈಗಾಗಲೆ ಖರೀಫ್, ರೇಬಿ ಹೋಗಿದೆ. ಅತಿವೃಷ್ಟಿಯಿಂದ ರೈತರು ಕಂಗಾಲಾಗಿದ್ದಾರೆ.ಸ್ಥಳೀಯವಾಗಿ ಕರೆಂಟ್, ನೀರು, ವಿದ್ಯುತ್ ಪಡೆಯುವ ನೀವುಗಳು (ಕಾರ್ಖಾನೆಗಳು) ರೈತರ ವಿಷಯದಲ್ಲಿ ಉದಾರತೆ ತೋರಿಸಬೇಕು. ದರ ನಿಗದಿ ಮಾಡದೆ ಕಬ್ಬು ಕಟಾವಿಗೆ ಅವಕಾಶ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ ಬಿ.ಆರ್.ಪಾಟೀಲ ಅವರು, ಸಭೆಯಿಂದಲೆ ಸಕ್ಕರೆ ಖಾತೆ ಸಚಿವ ಶಿವಾನಂದ ಪಾಟೀಲ ಅವರಿಗೆ ದೂರವಾಣಿ ಕರೆ ಮಾಡಿ, ರೈತರಿಗೆ ನ್ಯಾಯ ಒದಗಿಸುವಂತೆ ಕೋರಿಕೊಂಡರು.

ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಮಾತನಾಡಿ, ಕಬ್ಬಿಗೆ ದರ ನಿಗದಿ ಕುರಿತು ಈಗಾಗಲೆ ಕಾರ್ಖಾನೆ ಮತ್ತು ರೈತ ಮುಖಂಡರ ಜೊತೆ ಹತ್ತಾರು ಬಾರಿ ಸಭೆ ನಡೆಸಿದ್ದೇನೆ. ಏಕರೂಪ ದರ, ದ್ವಿಪಕ್ಷಿಯ ಒಪ್ಪಂದ,

ಕಾರ್ಖಾನೆಗಳಲ್ಲಿ ರೈತರಿಗೆ ಮೂಲಸೌಕರ್ಯ ಕಲ್ಪಿಸುವುದು, ರೈತರಿಗೆ ಮೋಸವಾಗದಂತೆ ತೂಕದಲ್ಲಿ ಪಾರ್ದರ್ಶಕತೆ, ಎಸ್.ಎಂ.ಎಸ್. ಸೇವೆ ಸೇರಿದಂತೆ ಅನೇಕ ವಿಷಯಗಳ ಕುರಿತು ಲಿಖಿತವಾಗಿ ಜಿಲ್ಲಾಡಳಿತದಿಂದ ನಿರ್ದೇಶನ ನೀಡಿದ್ದರು, ಕಾರ್ಖಾನೆಯವರು ಪಾಲಿಸುತ್ತಿಲ್ಲ. ಈ ಬಗ್ಗೆ ಕಬ್ಬು ಆಯುಕ್ತರಿಗೆ ವರದಿ ನೀಡುವೆ ಎಂದರು.








Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401